ಶ್ರೀಃ

ಶ್ರೀ ಮ ತೇ ರಾ ಮಾ ನು ಜಾ ಯ ನ ಮಃ

★

ಉಭಯ ಭಾಷಾ ವಿದುಷಿ.
ಶ್ರೀ ಮತಿ॥ ನಲ್ಲುಕ್ಕಂದಿ ಶ್ರೀ ರಂಗಮ್ಮ
ವಿರಚಿತಮಪ್ಪ

ಶ್ರೀ ಭೂ ವೈ ಕುಂ ಠ ಕಾ ವ್ಯಂ
ಅ ಥ ವಾ
ಶ್ರೀ ಯ ದ್ವ ದ್ರೀ ಶ ಚ ರಿ ತ ಕಾ ವ್ಯಂ

★

ಮು ದ್ರ ಕ ರು:
ಶ್ರೀಃ B.V. ಅಳಹಿಯಮಣವಾಳ್.
ಪ್ರೊಪ್ರೈಟರ್,
ಶ್ರೀವಿಜಯಲಕ್ಷ್ಮೀ ಪ್ರೆಸ್,
355. ಡಿ. ಸುಬ್ಬಯ್ಯ ರಸ್ತೆ, ಮೈಸೂರು.
1969.

ಶಕ ೧೮೯೧] [ಬೆಲೆ: ರೂ. ೧-೦೦

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಉಭಯ ಭಾಷಾ ವಿದುಷಿ.

ಶ್ರೀಮತಿ|| ನಲ್ಕ್ಯಂದಿ ಶ್ರೀ ರಂಗಮ್ಮ

ವಿರಚಿತಮಪ್ಪ

ಶ್ರೀ ಭೂವೈಕುಂಠಕಾವ್ಯಂ

ಅಥವಾ

ಶ್ರೀ ಯದ್ವದ್ರೀಶ ಚರಿತ ಕಾವ್ಯಂ

ಪ್ರಕಾಶಕರು:

ಶ್ರೀಃ B.V. ಅಳಹಿಯಮಣವಾಳ್.

ಪ್ರೊಪ್ರೈಟರ್,

ಶ್ರೀವಿಜಯಲಕ್ಷ್ಮೀ ಪ್ರೆಸ್,

೩೬೬. ಡಿ. ಸುಬ್ಬಯ್ಯ ರಸ್ತೆ, ಮೈಸೂರು.

1969

ಶಕ. ೧೮೯೧]   [ಬೆಲೆ: ರೂ. ೧-೦೦

೧೦೦೦ ಪ್ರತಿಗಳು

ಪ್ರಥಮ ಮುದ್ರಣ

1969

ಬೆಲೆ ರೂ. 1-00

ಶ್ರೀಃ

ಶ್ರೀ ಮ ತೇ ರಾ ಮಾ ನು ಜಾ ಯ ನ ಮಃ

ಸ ಮ ರ್ಪ ಣೆ

ಅಖಿಲ ಜಗದೇಕಾಚಾರ್ಯರುಂ, ಅಖಿಲ ಜಗತ್ಸ್ವಾಮಿಯುಂ, ಅಸ್ಮತ್ಸ್ವಾಮಿಯುಂ
ಶಾಂತಶಮದಮಾದ್ಯನಂತಕಲ್ಯಾಣ ಗುಣಪರಿಪೂರ್ಣರುಂ,
ಶ್ರೀ ಶೇಷಾಂಶಸಂಭೂತರುಂ, ಶ್ರೀ ಮದ್ವೇದಮಾರ್ಗ
ಪ್ರತಿಷ್ಠಾಪನಾಚಾರ್ಯೋಭಯವೇದಾಂತಪ್ರವರ್ತನಾಚಾರ್ಯರುಂ,
ಸಂಯಮಿಚಕ್ರವರ್ತಿಸಾರ್ವಭೌಮರುಂ, ಅನುಗ್ರಹೈಕಮಯರುಂ,—ಆಗಿ

ಶ್ರೀ ಯಾದವಾದ್ರಿಯೊಳ್ ಬಿಜಯಂಗೈದಿರ್ಪ

ಶ್ರೀ ಭಗವದ್ರಾಮಾನುಜಾಚಾರ್ಯರ

ದಿವ್ಯಕರಕಮಲಂಗಳಲ್ಲಿ
ಶ್ರೀ ಯದುಗಿರಿ ಜೀರ್ಣೋದ್ಧಾರೋತ್ಸವ ಸಮಯದೊಳ್
ಮಕರ ಶುಕ್ಲ ಪುನರ್ವಸು ಉತ್ಸವ
ದಿವ್ಯ ಶುಭ ದಿನದೊಳ್

ಶ್ರೀ ಯದ್ವದ್ರೀಶ ಮಾಹಾತ್ಮ್ಯ ಪ್ರಥಮ ಪುಷ್ಪಮಂ
ಸವಿನಯ ಭಕ್ತಿ ಪ್ರಪತ್ತಿ ಪೂರ್ವಕಂ
ಸಮರ್ಪಿಸುತ್ತಿರ್ಪ

ಭಕ್ತಾಂಘ್ರಿ ರೇಣು.

ನಲ್ಲಾಂದಿ ಶ್ರೀರಂಗಮ್ಮ

★

ನಿಗ್ರಹಾನುಗ್ರಹಗಳೆರಡುಂಟು

ನಮ್ಮೀ ಯದುಗಿರಿಯ ಚೆಲುವನಿಗೆ

ಅನುಗ್ರಹವೊಂದೇ

ಜಗತ್ಪಿತ-ರಾಮಾನುಜಗೆ—

(ಸಿಂಹವಾಣಿ)

—●—

ಶ್ರೀರಸ್ತು

ಶ್ರೀಮತೇ ರಾಮಾನುಜಾಯ ನಮಃ

ಮುನ್ನುಡಿ

ಶ್ರಿಯಃಪತಿಯಾದ ಶ್ರೀಮನ್ನಾರಾಯಣನು ಲೀಲಾರ್ಥವಾಗಿ ಈ ಜಗತ್ತನ್ನು ಸೃಷ್ಟಿಸಿದನು; ಅದರಲ್ಲಿನ ಈ ಭವಸಾಗರದಲ್ಲಿ ತೊಳಲಾಡುವ ಜೀವ ರಾಶಿಗಳ ಉದ್ಧಾರೇಚ್ಛೆಯಿಂದಅವುಗಳಿಗೆ ಕರಚರಣಾದ್ಯವಯವಗಳನ್ನು ಅನು ಗ್ರಹಿಸಿದನು; ಆಗಲೂ ಈ ಸಂಸಾರ ಬಂಧನದಿಂದ ವಿಮುಕ್ತರಾಗದ ಅವರ ದುರವಸ್ಥೆಯನ್ನು ಕಂಡು ಮರುಗಿ ವೇದವೇದಾರ್ಥಗಳನ್ನು ಉಪದೇಶಿಸಿ ಸನ್ಮಾರ್ಗವನ್ನು ಪ್ರದರ್ಶಿಸಿದನು; ಆಗಲೂ ತನ್ನಲ್ಲಿ ವಿಮುಖರಾದ ಆ ಜೀವಿ ಗಳ ಉದ್ಧಾರೇಚ್ಛೆಯಿಂದ ನಾನಾಅವತಾರಗಳನ್ನು ತಳೆದು ತನ್ನ ಕಡೆಗೆ ಜೀವಿಗಳು ತಿರುಗುವಂತೆ ಪ್ರೇರಿಸಿದನು; ಆಗಲೂ ಕೂಡ ಆತ್ಮಜ್ಞಾನ ವಿಮುಖರಾದ ಆ ಜೀವಿಗಳ ಮೇಲಿನ ಅಪಾರ ಕಾರಣ್ಯ ವಾತ್ಸಲ್ಯಾದಿಗಳಿಗೆ ಮನಸೋತ ಆ ಪರಮಾತ್ಮನು ನಿತ್ಯಕೈಂಕರ್ಯ-ನಿರತರಾದ ನಿತ್ಯಸೂರಿಗಳನ್ನು ಜಗದುದ್ಧಾರಕವಾದ ಮಾರ್ಗಪ್ರದರ್ಶನಾದಿಗಳಿಗಾಗಿ ಭೂಲೋಕದಲ್ಲಿ ಅವ ತರಿಸುವಂತೆ ಆಜ್ಞೆಯಿತ್ತು ಕಳುಹಿಸಿದನು.

ಆ ನಿತ್ಯಸೂರಿಗಳೂ ಕೂಡ ಭಗವದಾಜ್ಞೆಯಿಂದ ಭಗವತ್ಕೈಂಕರ್ಯ ರೂಪವಾಗಿ ಈ ಭೂಲೋಕದಲ್ಲಿ ಅವತರಿಸಿ ಪರಮಾತ್ಮನ ವಿಗ್ರಹ-ವಿಭೂತಿ ಐಶ್ವರ್ಯಾದಿಗಳ ಜ್ಞಾನವನ್ನು ಈ ಜಗತ್ತಿಗೆ ಉಪದೇಶಿಸಿ, ಅದರಂತೆ ಆಚರಿಸಿ ತೋರಿಸಿ ಜೀವರಾಶಿಗಳನ್ನು ಸನ್ಮಾರ್ಗಕ್ಕೆ ಒಯ್ದರು.

ಈ ನಿತ್ಯಸೂರಿಗಳೂ ಅವರಿಗಾಗಿ ಕಣ್ಗಂಡ ಭಗವಂತನೂ ನೆಲೆನಿಂತ ದಿವ್ಯದೇಶಗಳಲ್ಲಿ !ಸಾರತಮವಾದುದೇ ಮೇಲುಕೋಟೆ ಎಂದು ಲೌಕಿಕ ವ್ಯವಹಾರದಲ್ಲಿರುವ ತಿರುನಾರಾಯಣಪುರ.

ಈ ದಿವ್ಯಕ್ಷೇತ್ರದಲ್ಲಿ ಭಕ್ತಾನುಗ್ರಹಾರ್ಥವಾಗಿ ಅಖಿಲಜಗತ್ಪತಿಯೂ ಅಖಿಲಾಂಡಕೋಟಿಬ್ರಹ್ಮಾಂಡನಾಯಕನೂ, ಶ್ರೀಯಃಪತಿಯೂ, ಸಮಸ್ತ ಕಲ್ಯಾಣಗುಣಾಕರನೂ, ಆದ ಭಗವಂತನು ಸಾನ್ನಿಧ್ಯಮಾಡಿದ ಪರಿಯನ್ನೂ, ಈ ದಿವ್ಯಕ್ಷೇತ್ರವನ್ನು ಶೇಷಾಪರಾವತಾರ ಭೂತರಾದ ಶ್ರೀ ರಾಮಾನುಜರು ಜೀರ್ಣೋದ್ಧಾರಮಾಡಿ ನೆಲೆ ನಿಲ್ಲಿಸಿದ ಬಗೆಯನ್ನೂ ಕಾವ್ಯರೂಪದಲ್ಲಿ ವಿವರಿಸುವುದೇ ಈ ಯದ್ವದ್ರೀಶ ಚರಿತೆಯ ಉದ್ದೇಶ.

ಶ್ರೀಮನ್ನಾರಾಯಣನ ದರುಶನದಿಂದ ನನ್ನಲ್ಲಿ ಉಂಟಾದ ಅನುಭವಜನಿತ ಭಕ್ತಿಗೆ ಮನಸೋತ ತಿರುನಾರಾಯಣನು ತಾನೇ ತಾನಾಗಿ ನನ್ನ ಹೃದಯದಲ್ಲಿ ನಿಂತು ಮಂದಮತಿಯಾದ ನನ್ನ ಕೈಯ್ಯಿಂದ ಈ ಕಾವ್ಯವನ್ನು ತಾನೇ ಬರೆದಿರುವನು. ಭಗವದ್ರಾಮಾನುಜಾಚಾರ್ಯರ ಕೃಪೆಯಿಂದಲೂ ಮತ್ತು ಯದುಗಿರಿ ನಾಚ್ಚಿಯಾರ್ರವರ ಪುರುಷಕಾರದಿಂದಲೂ ಈ ಕಾವ್ಯವು ಹೊರಹೊಮ್ಮಿದೆ. ಏನೂ ತಿಳಿಯದ ಮಂದಬುದ್ಧಿಯಾದ ನಾನು ಬರೆದಿರುವ ಈ ಗ್ರಂಥದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಅದನ್ನು ಪ್ರಾಜ್ಞರು ಎಣಿಸದೆ ಬಾಲ ಭಾಷಿತಗಳನ್ನು ಹಿರಿಯರು ಕೇಳಿ,ನೋಡಿ, ಮುಗ್ಧರಾಗುವಂತೆ ಈ ಕವಿತೆಗಳಿಗೆ ಪ್ರೋತ್ಸಾಹ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಈಗ ಪ್ರಕಟವಾಗಿರುವ ಈ ಕಾವ್ಯವು ಯದ್ವದ್ರೀಶ ಚರಿತೆಯ ಒಂದು ಭಾಗ ಮಾತ್ರ.

ಮುಂದೆ ಮುದ್ರಣವಾಗಬೇಕಾದುವುಗಳು– ಆಂಡಾಳ್ ಕಲ್ಯಾಣ, ತಿರುಪ್ಪಾವೈ ವೈಭವದ ಹಾಡು ಮತ್ತು ಪದ್ಯಗಳು, ವೈರಮುಡಿ ಸೇವೆ, ಕಲ್ಯಾಣಿ

ವೈಭವ ಶಲ್ಯನಾರಾಯಣ ಯದುಗಿರಿ ನಾಚ್ಚಿಯಾರ್ ರಾಮಾನುಜಾಚಾರ್ಯರ ಮೇಲಿನ ಕೀರ್ತನೆಗಳು ಮುಂತಾದುವುಗಳು. (ಕೆಲವು ಹರಿಕಥಾರೂಪವಾಗಿವೆ)

ಕವಿತೆಯನ್ನು ಬರೆಯುವುದು ನಮ್ಮ ವಂಶಪಾರಂಪರ್ಯವಾಗಿ ಬಂದ ಒಂದು ಹವ್ಯಾಸ. ನನ್ನ ತಾಯಿ ಮತ್ತು ಪಿತಾಮಹರು ಅನೇಕ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ನನ್ನ ಸೋದರಮಾವನವರಾದ ಸುಪ್ರಸಿದ್ಧ ಕಾವ್ಯ ಸಾಹಿತ್ಯ ವಿದ್ವಾನ್ ಎ. ಜಿ. ತಿರುನಾರಾಯಣೈಯ್ಯಂಗಾರ್‌ರವರು, ನನ್ನ ತಂದೆ ಮತ್ತು ಆಚಾರ್ಯರಾದ ನಲ್ಲುಂದಿ. ವೀರರಾಘವಾಚಾರ್ಯರವರು ಇವರ ಅನುಗ್ರಹದಿಂದ ಅಲ್ಪಮತಿಯಾದ ನಾನು ಈ ಕಾವ್ಯವನ್ನು ಬರೆಯಲು ಕಾರಣವಾಗಿದೆ.

ಈ ಪುಸ್ತಕವನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಭಕ್ತಾದಿಗಳ ಮತ್ತು ಸಾಹಿತ್ಯಾರಾಧಕ ಉಪಯೋಗಕ್ಕಾಗಿ ಮುದ್ದಾಗಿ ಮುದ್ರಿಸಿ ಕೊಟ್ಟ ಶ್ರೀವಿಜಯ ಲಕ್ಷ್ಮೀ ಪ್ರೆಸ್ಸಿನ ಪ್ರೊಪ್ರೈಟರ್‌ರವರಾದ ಶ್ರೀ. B.V. ಅಳಗಿಯಮಣವಾಳ್ ರವರಿಗೆ ನಾನು ಕೃತಜ್ಞತಾಪೂರ್ವಕವಾದ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಇಂತು ಭಗವದ್ಭಕ್ತಪಾದರೇಣು

ನಲ್ಲುಂದಿ ಶ್ರೀರಂಗಮ್ಮ

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀ ಭೂವೈಕುಂಠಕಾವ್ಯಂ
ಅಥವಾ
ಶ್ರೀ ಯದ್ವದ್ರೀಶ ಚರಿತಂ

—ಮಂಗಳಾಚರಣ ಪ್ರಕರಣಂ—

ಯೋ ನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ-
ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ ||
ಅಸ್ಮದ್ಗುರೋರ್ಭಗವತೋಽಸ್ಯ ದಯೈಕಸಿಂಧೋಃ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ||

ಶ್ರೀಲಕ್ಷ್ಮೀಕುಚಕುಂಕುಮಾಂಕಿತಕರಂ ಶ್ರೀರಾಮಕೃಷ್ಣಾರ್ಚಿತಂ
ಮಾಲಾಭಾಸಿತಕಂಧರಂ ಸುರವರಬ್ರಹ್ಮಾದಿಸಂಸೇವಿತಂ
ವೇಲಾತೀತಕೃಪಾಲವಾಲನುಮಲಂ ಶ್ರೀಯಾದವಾದ್ರೀಶ್ವರಂ
ಭೂಲೋಕಾಮರಪಾದಪಂ ಯತಿಸುತಂ ಸಂಪತ್ಕುಮಾರಂ ಭಜೇ

ಬಾಲೇಂದುಪ್ರತಿಮಾನಫಾಲನಮಲಂ ಶ್ರೀಕೌಸ್ತುಭೋದ್ಭಾಸಿತಂ
ಲೀಲಾಮಾನುಷರೂಪಭಕ್ತವರದಂ ಶ್ರೀಯಾದವಾದ್ರೀಶ್ವರಂ
ನೀಲಾಂಭೋದಸುಕಾಯಮಬ್ಜನಯನಂ ಶ್ರೀವತ್ಸಚಿಹ್ನಾಂಕಿತಂ
ಶ್ರೀಲೋಲಂ ದಯೆಗೈಗೆ ಎಮ್ಮೊಳೊಲವಿಂದಾನಂದಮಂ ಭಕ್ತಿಯಂ

॥ ಗ್ರಂಥಕೃದಾಚಾರ್ಯಸ್ತುತಿ ॥

ಶ್ರೀಮಚ್ಛ್ರೀಷಕುಲೋದ್ಭವಂ ಗುರುವರಂ ಸಂಪತ್ಕುಮಾರಾತ್ಮಜಂ
ಶ್ರೀಮದ್ರಾಮಕಥಾಗಮಾದಿಚತುರಂ ಯದ್ವದ್ರಿನಾಥಾಶ್ರಯಂ
ಸೀಮಾತೀತಗುಣಾಶ್ರಯಂ ವರನೃಸಿಂಹಾರ್ಯಾಚಾರ್ಯಪಾದಾಶ್ರಿತಂ
ಶ್ರೀಮದ್ರಾಘವನಾಮಧೇಯಮಹಿತಂ ವಂದೇ ಸದಾಽಹಂ ಮುದಾ ॥

ಇಂತು ಸಕಲದ್ರಮಿಡ-ಸಂಸ್ಕೃತತತವೇದಪಾರಾವಾರಪಾರೀಣಸ್ಮೃತೀತಿಹಾಸಾ-
ಗಮಾದಿಸಕಲಶಾಸ್ತ್ರಸಂಪತ್ಸಂಯುಕ್ತ–ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾ-
ಚಾರ್ಯೋಭಯವೇದಾಂತಪ್ರವರ್ತನಾಚಾರ್ಯೇತ್ಯಾದಿ-ಸಾರ್ಥಕ
ವಿಶೇಷಣವಿಶಿಷ್ಟ-ಶ್ರೀಶೇಷಾಂಶಭೂತಾಖಿಲಜಗದೇಕಾಚಾರ್ಯ
ಶ್ರೀರಾಮಾನುಜಾರ್ಯಾಪರಾವತಾರಭೂತಶ್ರೀಗೋಮಠಂ–
ಶ್ರೀಯತೀಂದ್ರಪ್ರವಣವಂಶೋದ್ಭವ-ಶ್ರೀಮನ್ನೃಸಿಂಹಾರ್ಯ
ಪಾದಾಶ್ರಿತ-ಶ್ರೀರಾಘವಾರ್ಯ-ಚರಣಕಮಲಚಂಚರೀಕೆಯುಂ,
ಕವಿಕುಲಮನಸ್ಸರೋಜಿನೀರಾಜ- ಹಂಸೆಯುಂ,
ಆದ,-ಶ್ರೀ ಶ್ರೀರಂಗನಾಯಕೀ
ವಿರಚಿತಮಪ್ಪ,

ಶ್ರೀ ಯದ್ವದ್ರೀಶಚರಿತಮಹಾಕಾವ್ಯದೊಳು
ಮಂಗಳಾಚರಣಪ್ರಕರಣಂ ಸಮಾಪ್ತಂ.

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಭಗವದ್ರಾಮಾನುಜಾರ್ಯಾವತಾರ-ತದ್ರಹಸ್ಯ-ವೈಭವಾದಿ-ಪ್ರಕರಣಂ

ಸೂಚನೆ:– ಪರಮಪದನಾಥನನು ಆಗಲುತ
ಪರಿಯ ವಿಭವಗಳನ್ನು ಅರುಹಲು
ಧರಣಿಯೊಳಗವತರಿಸಿದನು ವರಶೇಷ ಗುರುವಾಗಿ

ಕೇಳಿರೈ ವ್ಯಾಸಾದಿಮುನಿಗಳೆ
ಶ್ರೀಲತಾಂಗಿಯ ರಮಣನೊಲವಿನ
ಮೇಲೆನಿಪ ಯದುಗಿರಿಯ ವಿಭವವನ ವರಚರಿತೆಗಳಾ
ಪೇಳುವೆನು ಮನವೊಲಿದು ಸಜ್ಜನ
ಜಾಲಪದಕಭಿನಮಿಸಿ ವಿನಯದಿ
ತಾಳಿ ಸಂತೋಷದೊಳು ಹರಿಮಹಿಮೆಗಳ ವಿಭವಗಳಾ ೧

ಧರಣಿಯೊಳು ಕಲಿಪುರುಷನಿಂದಲಿ
ಮರೆಯುತಲಿ ತತ್ವಾರ್ಥವೆಲ್ಲವ
ನರರು ಪೂಜಿಸದಿಹರು ಹರಿಯನು ಮರುಳರಾಗುತಲಿ
ಅರುಹುತಲಿ ವೇದಗಳ ಹಳಿಯುತ
ಪರಿಪರಿಯಪಾರ್ಥಗಳ ಕಲ್ಪಿಸಿ
ಮೆರೆಯುವರು ಪಾಷಂಡಷಂಡರು ಅಧಿಕಸಂಖ್ಯೆಯಲಿ ೨

ಪುಸಿಯ ನುಡಿಯುತ ಹಳಿದು ನಿಗಮಕೆ
ಪೊಸತೆನಿಪ ದೂಷ್ಯಾರ್ಥಗಳನತಿ
ಕುಶಲದಿಂ ವಾಚಿಸುತ ಬೋಧಿಸುತ ಜಗಕೆಲ್ಲಾ

ಪಸರಿಸುತ ದುಷ್ಕೃತಗಳೆಸಗುತ
ಉಸಿರುವರು ತನುತನ್ನದೆನ್ನುತ
ಒಸೆದು ತಮ್ಮನೆ ಈಶನೆನ್ನುತ ಮೆರೆಯುತಿಹರಿಳೆಯೊಳ್ ೩

ಶ್ರೀಧರನಗುಣಗಳನು ಹಳಿಯುತ
ವೇದದರ್ಥವನೆಲ್ಲ ತೊರೆಯುತ
ಮೂದಲಿ ಹರಿಕೀರ್ತನೆಗಳನು ಮಾಡದಲೆ ಮೆರೆದೂ
ಆದಿಕೇಶವನಡಿಯ ನೆನೆಯದೆ
ವೇದಬಾಹ್ಯರು ನಾಶಜೀವನ
ವಾದಿಗಳು ತಾವಾದರೀ ಕಲಿಯುಗದೊಳಗೆ ಮನುಜರ್ ೪

ಇಚ್ಛೆಯಿಂದಲಿ ರಾಜ್ಯವಾಳುತ
ಹೆಚ್ಚಿದರು ಕಲಿಯೊಳಗೆ ವ್ಲೇಂಛರು
ಸಚ್ಚರಿತಗಳು ಆರ್ಯಧರ್ಮಗಳೆಲ್ಲ ತೊಲಗಿದವೂ
ಉಚ್ಚರಿಸಲಸದಳವು ಧರೆಯೊಳು
ಅಚ್ಚರಿಯು ಸಜ್ಜನಕೆ ತಾಪವ
ನಿಚ್ಚಲುಂ ನೀಡುತಲಿ ಮೆರೆದರು ಅಧಿಕಗರ್ವದೊಳು ೫

ಪರಮಧರ್ಮವ ತೊರೆದರೆಲ್ಲರು
ಅರಿವು ತೋರದೆ ದುರುಳರಾದರು
ಭರದಿ ಮ್ಲೇಂಛರು ಹರಿಯ ದೇವಾಲಯವ ಪುಗುತ್ತೈದಿ
ಮೆರೆವ ಉತ್ಸವ-ವಿಗ್ರಹಗಳನು
ಇರದೆ ಕೊಂಡೊಯ್ದುತಲಿ ಡಿಲ್ಲಿಯೊ
[1]ಳಿರುವ ಕೋಶಾಗಾರದಲಾ ತುಂಬಿದರು ಮನವೊಲಿದು[1] ೬

ಸಾನುರಾಗದಿ ಕಲಿಯು ಪೊಕ್ಕನು
ಭಾನುಕೋಟಿಸಮಾನತೇಜನ
ಮೌನಿಜನ ಪೂಜಿತನ ತಿರುನಾರಣಪುರಿಗಾಗ

---

1. ಳರಸನಾಲಯದೊಳಗೆ ತುಂಬಿದರಾಗಮನವೊಲಿದು (ಕ), ಳರುವರಸನಾಲಯದಿ ಕೋಶಾಗಾರದೊಳಗಿಟ್ಟರ್ (ಚ).

ಏನಿದಚ್ಚರಿಯೆಂದೆನುತಲಾ
ಮೌನಿವ್ರಾತವು ತಾಪಸಾನುತ
ಮಾನಸದಿ ಧ್ಯಾನಿಸುತ ಹರಿಯರ್ಚನೆಯನೆಸಗುತ್ತ ೭

ಇರಲು ಮ್ಲೇಂಛರು ಚಲುವರಾಯನ
ಭರದಿ ಕೊಂಡೊಯ್ದು ತಲಿ ಹರುಷದಿ
ಇರಿಸಿದರು ಡಿಲ್ಲೀಶನಾಲಯದೊಳಗೆ ಕೋಶದಲೀ
ತರಳೆ ಮ್ಲೇಂಛನ ರಾಜಸುತೆ ತಾ
ತರಣಿತೇಜದ ಚಲುವ[1]ಮೂರ್ತಿಯ[1]
ಕರದಿ ಪಿಡಿಯುತಲಾಡಿಸುತ ಪರಿಪರಿಯ ಲೀಲೆಯೊಳು ೮

ಮೆರೆವ ಅಂತಃಪುರಕೆ ಒಯ್ಯುತ
ವರ ರಕುನಮಯ ಚಲುವಪೀಠದಿ
ಹರಿಯನಿರಿಸುತ ವಿವಿಧದುಪಚಾರಗಳ ವಿರಚಿಸುತ
ಸರಿಗೆಳತಿಯರ ಕರೆದು ಕರದೊಳು
ಕಿರುನಗೆಯ ಚಲುವನನು ಆಡಿಸಿ
ಪರಮಹರುಷದಿ ನಲಿದು ನರ್ತಿಸುತಿದ್ದಳಾ ಬಾಲೇ ೯

ತನುವಿನೊಳು ಬ್ರಹ್ಮಾಂಡಕೋಟಿಗ
ಳನು ಅಡಗಿಸಿಹ ವಿಶ್ವಮಯ ತಾ
ಮನವೊಲಿದು ಸೇರಿದನು ಡಿಲ್ಲೀನಾಥಸುತೆ ಕರದಿ
ಮುನಿಗಳೊಗ್ಗಿಲಿ ಮಾನಸದಿ ಹರಿ
ಧ್ಯಾನಮಾಡುವ ಜಪತಪದೊಳಿರೆ
ಜ್ಞಾನನಿಧಿ ತಿರುನಾರಣನು ಸೇರಿದನು ಹುತ್ತದಲಿ ೧೦

ತಾಪಸೋತ್ತಮರೆಲ್ಲ ನೋಡುತ
ಪಾಪಪೂರಿತವಾದ ಕಲಿಯೊಳು
ಶ್ರೀಪತಿಯ ಮಾನಸದಿ ಪೂಜಿಸುತಾಗ ಮರುಗುತಿರೇ

---

1. ರಾಯನ (ಕ).

ಈಪರಿಯ ದುಶ್ಚರಿತಗಳ ತಾ
ಶ್ರೀಪತಿಯು ನಿರಕಿಸುತ ಬಳಲುತ
ಆ ಫಣಿನಿವಾಸದೊಳು ಅಡಗಿದ ಯದುಗಿರಿಗೆ ಒಡೆಯಾ ೧೧

ಸುತ್ತಬೆಳೆಯಿತು ದೊಡ್ಡಹುತ್ತವು
ಮತ್ತೆ ಮುಚ್ಚಲು ತರುಲತೆಗಳವು
ಉತ್ತಮದ ಆನಂದಮಯದಾ ವಿಮಾನಮರೆಯಾಯ್ತೂ
ಚಿತ್ತರವನೇನೆಂಬೆ ಯದುಗಿರಿ
ಎತ್ತಣದು ತಾನೆಂಬ ಪರಿಯಲಿ
ಚಿತ್ತವನು ಭ್ರಮೆಗೊಳಿಸಿತಾ ಕಲಿಪುರುಷ ಮಹಿಮೆಯಲಿ ೧೨

ಮಾನವರ ಈಪರಿಯ ಕೃತ್ಯವ
ಹಾನಿಯತ್ಯಾಚಾರಗಳ ತಾ
ಶ್ರೀನಿಲಯ ನಿರಕಿಸುತ ಬೇಸರಪಡುತದುಗುಡದಲಿ
ಮಾನವರ ಕಣ್ಮನಕೆ ಕಾಣದೆ
ಸಾನುರಾಗದಿ ನಿತ್ಯಮುಕ್ತರ
ದಾನವಾರಿಯು ಸೇರಿದನು ಶ್ರೀಪರಮಪದದೊಳಗೆ ೧೩

ಪರಮಪದದೊಳು ಪರಮಪುರುಷನು
ಮೆರೆವ ಮಣಿಮಯಮಂಟಪದೊಳಗೆ
ಸಿರಿಸಹಿತ ವರಫಣಿಯ ಪೀಠದಿ ಕುಳ್ಳಿರುತಲಿರಲೂ
ಮಿರುಗುತಿಹ ಚಾಮರವ ಬೀಸುತ
ಲಿರಲು ಪರಿಜನಜಾಲಗಳ ತಾ
ನಿರಕಿಸುತಲೀಪರಿಯ ವಚನವ ನುಡಿದ ಕರುಣಾಳು ೧೪

ಇಂದೆನಗೆ ಈಪರಿ ವಿಲಾಸಗ
ಳೊಂದು ಮನಕಾನಂದವೀಯವು
ಇಂದು ಧರೆಯೊಳು ವೇದಗಳಿಗಪಾರ್ಥ ಕಲ್ಪಿಸುತಾ

ಮಂದಮತಿಗಳು ಒಂದುಗೂಡುತ
ತಂದಿಹರು ದೂಷ್ಯಾರ್ಥಗಳ ತಾ
ವಿಂದು ಸೈರಿಪೆನೆಂದೆನುತ ಹರಿ ಪೇಳಿ ಬಿಸುಸುಯ್ದ ೧೫

ಶ್ರುತಿಯನಿತ್ತೆನು ಸ್ಮೃತ್ತಿನುಯನಿತ್ತೆ
ಕ್ಷಿತಿಯೊಳವತರಿಸಿದೆನು ಮಾನವ
ತತಿಗೆ ಸನ್ಮತಿಯಿತ್ತು ನಿಗಮಾರ್ಥಗಳನರುಹಿದೆನು
ಮತಿವಿಕಳರನು ಮಡುಹಿ ಧರ್ಮದ
ಅತಿಶಯಿತತತ್ವಗಳ ನಿಲಿಸುತ
ವ್ರತವಿದೆನಗೆಂದೆನು ಭಕ್ತರಿಗಭಯವಿತ್ತಿಹೆನು ೧೬

ಏನು ಮಾಡಿದರೇನು ಇಳೆಯೊಳು
ಶೂನ್ಯವಾಯಿತು ವೇದದರ್ಥವು
ಹಾನಿಯನು ನಾನೆಂತು ಸೈರಿಪೆ ಪೇಳಲಸದಳವೂ
ಶೂನ್ಯರು ಆಗುತಲಿ ಮಾನವರು
ಮನವೊಲಿದೆಮ್ಮ ತತ್ವವನೆಲ್ಲ
ಅನುದಿನ ಹಳಿಯುತಲಿ ಮತಿಹೀನರಾಗಿಹರೂ ೧೭

ಎಂದು ಮರುಗತ ವಾಸುದೇವನು
ಮುಂದೆ ನಿಂತಿಹ ನಿತ್ಯಮುಕ್ತರ
ವೃಂದವನು ನೋಡುತಲಿ ಪೇಳಿದ ಮಧುರವಾಣಿಯೊಳು
ಇಂದು ಧರೆಯೊಳು ಮಾನವರು ತಾ
ವಂದು ಮರೆತರು ವೇದದರ್ಥವ
ನೇಂದು ಇದಕೇಗೈವೆ ನಾನೆಂದೆನುತಲಳಲಿದನು ೧೮

ಬಳಿಕಲಾ ವೈಕುಂಠನಾಥನು
ಬಳಿಗೆ ಕರೆಯುತಲಾದಿಶೇಷನ
ಇಳೆಯ ಅತ್ಯಾಚಾರಗಳ ನೆನೆನೆನೆದು ಚಿಂತಿಸುತ

ಕಳಿಸಿದನು ವಃಸಮರುಗಿ ಕರುಣದಿ
ನೆಲದೊಳುದಿಸುತ ಮನುಜರನು ನೀ
ಸಲಹಿ ತತ್ವದ ನೆಲೆಯ ನಿಲಿಸೈ ಭುವಿಯೊಳೆಲ್ಲೆಡೆ[1]ಯೋಳ್[1] ೧೯

ಅರಿಯದೈ ನರರೆಲ್ಲ ಕಿಡುವರು
ದುರಿತಗಳನಾಚರಿಸಿ ನಿಗಮಕೆ
ಬರಿದೆ ದೂಷ್ಯಾರ್ಥಗಳ ಕಲ್ಪಿಸಿ ಬರೆಯುತಲಿ ಜನಕೇ
ಮರೆತು ವರತತ್ವಾರ್ಥಗಳ ತಾ
ವಿರಚಿಪರು ದೂಷ್ಯಾರ್ಥಗಳನಾ
ನರಿಯೆ ಇದಕೇಗೈವೆ ಪೇಳೆಂದೆನುತ ಬಿಸುಸುಯ್ದು ೨೦

ಲಾಲಿಸೆಲೆ ಫಣಿರಾಜ ಎನ್ನಯ
ಮೇಲೆನಿಪ ತತ್ವಾರ್ಥವೆಲ್ಲವ
ಪೇಳಿ ಧರೆಯೊಳು ಜನಕೆ ನೀನಾಚಾರ್ಯನಾಗುತಲೀ
ಲೀಲೆಯಿಂದವತರಿಸು ನರರಿಗೆ
ಶೀಲಸುಗುಣವ ಕಲಿಸು ಎನ್ನುತ
ಶ್ರೀಲತಾಂಗಿಯ ರಮಣ ಸಂತೈಸಿದನು ಶೇಷನಾ ೨೧

ತಳೆದೆ ಇಳೆ[2]ಯೊಳು[2] ಶೇಷನಾಗುತ
ಬಳಿಕೆನಗೆ ನೀನನುಜನಾಗುತ
ತೊಳಲಿ ಕಾನನವೆಲ್ಲವನು ನೀನೂಳಿಗವ ಗೈದೂ
ನಲವಿನಿಂದೆಸಗುತ್ತ ಬಳಿಕಲಿ
ಹಲಧರನು ನೀನಾಗುತಲೆ ಬಹು
ಬಳಲಿದೇಮುದೆರದೊಳೆನ್ನೊಡ[3]ನ್[3]ಲದೆ ಭುವಿಯೊಳಗೇ ೨೨

ಇಂದಿರೇಶನ ಅಂದವಚನವ
ಆಂದದಿಂದಲಿ ಕೇಳಿ ಶೇಷನು
ನೊಂದು ನುಡಿದನು ಪದಕಮಲದಲಿ ಶಿರವನಿರಿಸುತಲೀ

---

1. ಡೊಳೂ 2. ಯನು (ಕ) 3. ಗ (ಕ).

ಒಂದನರಿಯೆನು ಮುರಹರನೆ ನೀ
ನಿಂದು ಎನ್ನನು ಕರಪಿಡಿದು ಮುದ
ದಿಂದ ಪಾಲಿಸು ಭುವಿಗೆ ಪೋಗುವೆನೆಂದು ಅರುಹುತಲೀ ೨೩

ಬಳದೆ ನಿನ್ನ ಪದಾಬ್ಜ ಯುಗಳದ
ನಲವು ಪಡೆದವಲೋಕನದೊಳಿಳೆ-
ಯೊಳಗೆ ಸಾನಿರಲಾರೆ ಮಾಧವನೆನು ತಲೊರಲುತಲೀ
ಬಲುವಿನಯದಿಂ ಬಾಗಿ ನಮಿಸುತ
ನಳಿನಲೋಚನ ನಿನ್ನ ಬಿಟ್ಟಗ
ಲಲಾರೆನೆನುತ್ತ ಕಂಬನಿ ತುಂಬಿದನು ಮುಗುಡದಲೀ ೨೪

ಪುಳಕವಾಂತು ಶರೀರವೆಲ್ಲವು
ತುಳುಕೆ [1]ಕಣ್ ಜಲಗಳಡಿ ಗದ್ಗದ
ತಳೆದ ರವದಿಂ ಶಿರವನೊಡ್ಡುತ ಹರಿಯ ಚರಣದಲೀ
ಬೆಳಗಿದನು ಸಾಸಿರಫಣಾಳಿ
ಗಳಿಂದಲಾರತಿಯೆತ್ತಿ ಹರಿ
ಎಳೆತಳಿಂಪೋಲುವ ಚರಣಯುಗಳವ ಒಳಲುತಲಿ ಶೇಷಾ ೨೫

ಇಂದಿರೆಯು ನೋಡುತ್ತಲಾಗಲೆ
ಬಂದು ಶೇಷನ ಫಣೆಗಳನು ಆ-
ನಂದದಿಂದಾಲಿಂಗಿಸುತಲಿನಿವಾತಿನಿಂ ನಗು[2]ತಾ
ಕಂದಬಾರೈ ಇಳೆಯೊಳೆನಗೆ ನೀ
ತಂದೆಯಾಗುತ ಮಂದಮತಿಗಳ
ಕುಂದುಗಳ ತಿದ್ದುತಲಿ ಎನ್ನಯ ತತ್ವಗಳನರುಹೈ ೨೬

ಎಂದು ನುಡಿಯುತ ಮಂದಹಾಸದಿ
ಬಂದು ನಿತ್ಯರ ಮುಕ್ತಗಡಣಗ-
ಳಿಂದೆಸೆವ ಸಭೆಯೊಳಗೆ ಕೈಯೆತ್ತುತ್ತ ಮಾಧವನೂ

---

1 ಕಂಬನಿ (ಕ). 2. ತ (ಕ)

ಇಂದು ಎನ್ನ ವಿಭೂತಿಯೆರಡನು
ಅಂದದಿಂದಿತ್ತಿಹೆನು ಇಳೆಯೊಳು
ಎಂದನುದಿಸು ಫಣಿರಾಜ ನೀ ಯತಿರಾಜನಾಗುತಲೀ ೨೭

ಸಿರಿಯೆ ಶಂಖವೆ ವರಸುದರ್ಶನ
ಮೆರೆವ ಸೇನಾನಾಥ ಮುಕ್ತರೆ
ಒರೆವ ನಿತ್ಯರಿ ಕೇಳಿ ಎನ್ನಯ ತಳ್ಪಗಳನಿಳೆಯೋಳ್
ನರರಿಗರುಹುತಲರಿವ ನೀಡುತ
ಮೆರೆವ ಬಾಹ್ಯಕುದೃಷ್ಟಿಗಳ ತಾ-
ನಿರದೆ ಶೋಷಣೆಗೈವನೀ ಶೇಷನು ಸರಾಗದೊಳೂ ೨೮

ಎನುತಲಾ ವೈಕುಂಠನಾಥನು
ಘನದಿ ನುಡಿಯುತಲಾದಿಶೇಷನ
ತನುವನಾಲಿಂಗಿಸುತಲಿನಿವಾತಿನಲಿ ಮನ್ನಿಸುತಾ
ಮನನಿ ದುಗುಡುವನಿನಿತು ಮಾಡದೆ
ಮನವ ಮಾಡುತ ಭಂದಿ ಇಳೆಯೊಳು
ಘನತರದ ಆಚಾರ್ಯನಾಗವತರಿಸು ನೀನೆನಲೂ ೨೯

ಬಾಗಿ ನಮಿಸುತಲಾದಿಶೇಷನು
ಪೋಗಲಾರೆನು ದೇವ ಇಳೆಯೊಳ-
ಗೀಗ ನಿನ್ನನು ಅಗಲಿ ಜೀವಿಸಲಾರೆ ಮಾಧವನೇ
ಬೇಗ ಕರುಣಿಸಿ ಎನ್ನ ಪೊರೆಯೈ
ಯೋಗಿಜನಹೃದಯಾಬ್ಜ ಮಂದಿರ
ನೀಗಿಸೊ ಭವಬಂಧನವ ಕಳೆದೆನ್ನ ನೀಪೊರೆಯೋ ೩೦

ಮರೆಯಲಾರೆನು ನಿನ್ನ ಸೇವೆಯ
ಮರೆಯಲಾರೆನು ನಿನ್ನ ವಿಭವವ
ಮರೆಯಲಾರೆನು ನಿನ್ನ ಈ ವೈಕುಂಠಪದವಿಗಳಾ

ಮರೆಯಲಾರೆನು ನಿನ್ನ ಕರುಣಾ
ವರಕಟಾಕ್ಷದ ಪರಿಯ ನಿತ್ಯದ
ಸಿರಿಯನೆಂದೆನುತಾಗ ಬಿಸುಸುಯ್ದನು ಫಣೀಶನು ತಾ ೩.೧

ಅಂಧನನು ಕೈಪಿಡಿದು ಅಂದದಿ
ಮುಂದೆ ಪಥದೊಳು ನಡೆಸುವಂದದಿ
ತಂದೆ ನೀ ಬಂದೆನ್ನ ಕರುಣದಿ ಕರಪಿಡಿದು ಕಾಯ್ವೈ
ಒಂದನರಿಯೆನು ನೊಂದೆ ಮನದೊಳು
ಬಂದು ಪಾಲಿಸೊ ದಯವ ತೋರಿಸೊ
ಇಂದಿರಾಧವ ನಿನ್ನ ಬೇಡುವೆನೆನುತಲೊರಲುತಲೀ ೩.೨

ನಿನ್ನ ಆಜ್ಞಾವಚನದೊಳು ನಾಂ
ಮುನ್ನ ಧರೆಯೊಳು ಪುಟ್ಟಿದರು ನೀ-
ಯೆನ್ನ ಪೋಗೆನು ಜ್ಞಾನವಿತ್ತೆನಗೊಲಿದು ಹಿತದಿಂದಾ
ನಿನ್ನ ಮಹಿಮನೆ ಕೈಬಿಡದೆ ಪೊರೆ
ಯೆನ್ನ ಅಪರಾಧಗಳನೆಣಿಸದೆ
ಇನ್ನು ಪೋಗುವೆ ಭುವಿಗೆನುತ ನಮಿಸುತಲಿ ಶಿರಬಾಗೀ ೩.೩

ಮರುಗುತಲಿ ಶ್ರೀಹರಿಯ ಚರಣಕೆ
ಎರಗಿ ಶ್ರೀಪರವಾಸುದೇವನ
ತಿರುತಿರುಗಿ ನೋಡುತಲಿ ಆಜ್ಞಾವಚನವನು ಸ್ಮರಿಸೀ
ಪರಮಪದದಿಂದ ಹೊರಟು ಶೇಷನು
ಧರಣಿಯೊಳು ಅವತರಿಸಿದನು ಸಿರಿ
ಪೆರುಂಪುದೂರೆನ್ನಿಪ ದಿವ್ಯಸ್ಥಳದಿ ಹರುಷದೊಳೂ ೩.೪

ಮೆರೆವ ದ್ರಾವಿಡದೇಶದೊಳು ಶ್ರೀ
ಪೆರುಂಪುದೂರೆಂದೆನಿಪ ಊರೊಳು
ಇರುವ ಕೇಶವಸೋಮಯಾಜಿಯ ಕಾಂತಮತಿಯೆನಿಸಾ

ತರುಣಿಯುದರದಿ ಜನಿಸಿದರು ವರ
ತರಣಿತೇಜಸಮಾನರಾಗುತ
ನೆರೆವ ವಿಪ್ರೋತ್ತಮರ ಕುಲಮಣಿದೀಪರೆಂದೆನಿಸೀ ೩೫

ವರ ರವಿಯ ತೇಜದಲಿ ರಾಜಿಪ
ವರಕುಮಾರಗೆ ನಾಮಕರಣವ
ವಿರಚಿಸಿದರಾ ಸೋಮಯಾಜಿಯು ಮನ ಒಲಿದು ನಲಿದೂ
ಕರಸಿ ವಿಪ್ರೋತ್ತಮರ ಮುದದಿಂ
ಭರದಿ ರಾಮಾನುಜರು ಎನ್ನುತ
ಸುರುಚಿರದ ವರ ಪೆಸರನಿಟ್ಟರು ಲಕ್ಷ್ಮಣಾರ್ಯರಿಗೇ ೩೬

ಲಲನೆಕಾಂತಿಮತಿಯ ಕುವರಗೆ
ನಲವಿನಿಂದಲಿ ಸೋಮಯಾಜಿಯು
ಒಲಿದು ವಿದ್ಯಾಭ್ಯಾಸ–ಉಪನಯನಗಳ ವಿರಚಿಸಲೂ
ಬಳಿಕ ಶ್ರೀರಾಮಾನುಜಾರ್ಯರು
ಕಲಿತು ಪರತತ್ವಗಳ ವಿದ್ಯೆಯ
ಒಲಿದು ಗೃಹಸ್ಥಾಶ್ರಮವ ಸ್ವೀಕರಿಸಿದರು ಹರುಷದಲೀ ೩೭

ಇರಲು ಗೃಹಧರ್ಮದಲಿ ಶ್ರೀಹರಿ
ಪರತರಾನುಗ್ರಹದಿ ತತ್ವವ
ನರಿತು ಪಂಚಾಚಾರ್ಯರಿಂ ಬಹುಶ್ರುತಿಯ ಸಾರಗಳಾ
ತೊರೆದು ಗ್ರಹಸ್ಥಾಶ್ರಮವ ಬೇಗದಿ
ಉರುತರದ ಶಾಸ್ತ್ರಾರ್ಥಗಳ ನಲವಿಂ
ಪರಿಚರಿಸಿ ಪರವಾದಿಗಳ ವಾದದಲಿ ಜೈಸುತಲಿ ೩೮

ಮತಿಯುತರು ಯತಿಸಾರ್ವಭೌಮರು
ಅತಿಶಯದ ಪರಮಾರ್ಥತತ್ವವ
ಮಿತಿಯು ಇಲ್ಲದ ಸಕಲಶಾಸ್ತ್ರಾರ್ಥಗಳನಭ್ಯಸಿಸೀ

ಶ್ರುತಿಗಸಾರ್ಥವ ಕಲ್ಪಿಸಿದ ಕು
ಮತಿಗಳ ದುರ್ಮತಗಳನು ಖಂಡಿಸಿ
ಶ್ರುತಿಯ ಸಾರವ ಸಾರುತಿಹ ಉದ್ಗ್ರಂಥಗಳ ರಚಿಸೀ ೨೯

ಭರದಿ ಸನ್ಯಾಸಾಶ್ರಮವ ಸ್ವೀ
ಕರಿಸಿ ದಿಗ್ವಿಜಯಗಳ ಮಾಡುತ
ಹೊರಟು ಶಾರದೆಯೊಡನೆ ವಾದಿಸಿ ವಾದದಲಿ ಗೆಲಿದೂ
ಬಿರುದ ಪಡೆಯುತ ಭಾಷ್ಯಕಾರರು
ಮೆರವ ವಿಶಿಷ್ಟಾದ್ವೈತದರ್ಶನ
ದುರುತರದ ಸ್ಥಾಪನೆಯ ವರ ಆಚಾರ್ಯರೆಂದೆನಿಸೀ ೩೦

ಸಾರತಂ ಶ್ರೀಭಾಷ್ಯಗ್ರಂಥವ
ನೀರಿದಾನಂದದಲಿ ರಚಿಸುತ
ಧೀರತನದಿಂದಿಳೆಗೆ ಬೋಧಿಸಿ ಹರಿಯ ಮಹಿಮೆಗಳಾ
ಸಾರುತಲಿ ತಿರುಮಂತ್ರದರ್ಥವ
ಚಾರುತರವಿಭವದಲಿ ಧರೆಗಾ-
ಚಾರ್ಯರಿವರೆಂದೆನಿಸಿ ಎಳೆರವಿಯಂತೆ ರಾಜಿಸಿದರ್ ೩೧

ಚೋಳರಾಜನ ಹಗೆತನವ ತಾ
ತಾಳಲಾರದೆ ಹೊರಟು ಬೇಗದಿ
ಮೇಲೆನಿಪ ಕರ್ಣಾಟದೇಶಕೆ ಮನವೊಲಿದು ಬಂದೂ
ಖೂಳ ಚಾರ್ವಾಕನು ಪಾಷಂಡಿಗಳ
ಲೀಲಾಮಾತ್ರದಿಂ ಪ್ರತಿವಾದಿಗಳ
ಜಾಲಗಳ ವಾದದಲಿ ಗೆಲಿದರು ಪರಮಹರುಷದಲೀ ೩೨

ಗೆಲಿದು ಹರಿಮಹಿಮೆಗಳ ತೋರಿಸಿ
ಒಲಿದು ಶ್ರೀವೈಷ್ಣವನನಾಗಿಸಿ
ಬಲಿದ ಬಿಟ್ಟಿಯದೇವನಂ ವಿಷ್ಣುವರ್ಧನನು ಎನಿಸೀ

Funding: Tattva Heritage Foundation,Kolkata. Digitization: eGangotri.

ಬಳಿಕ ತೊಂಡನ ಊರೊಳಿರುತಲಿ
ನಲವಿನಿಂದರ್ಚಿಸುತ [1]ನಂಬೀ[1]
ಚಲುವನಾರಾಯಣನ ಸನಿಹದಿ ವಾಸಿಸಿದರೊಲವಿಂ ೪೩

ಬಿಡುತ ದ್ರಾವಿಡದೇಶವನು ತಾ
ನಡೆತಂದು ಕರ್ಣಾಟಕವೋಳ್
ಒಡನೆ ಜೈನರ ವಾದದಲಿ ಗೆಲ್ಲುತಲಿ [2]ಮುದವಾಂತು[2]
ಕಡಲಶಯನನ ನಂಬಿನಾರಾಯಣನ
ಬಿಡದರ್ಚಿಸುತ ತೊಂಡನ ಊರೊಳಿರೆ
ಕಡುಹರುಷದಲಿ ಶಿಷ್ಯವೃಂದಗಳೊಡನೆವೆರಸುತ್ತಾ ೪೪

ಧರಿಸಿ ಊರ್ಧ್ವದ ಪುಂಡ್ರವದು ತಾ
ನಿರದಿರಲು ಕೊರಗುತಲಿ ಮಲಗಿರೆ
ಬರೆದ ಕನಸಿನೊಳ್ ನಗುತ ತಿರುನಾರಣನು ಒಲವಿಂದಾ
ಭರದಿ ಬಂದೆದುಗಿರಿಗೆ ನೀವದ
ಧರಿಸಿ ಎನ್ನ ಉದ್ಧರಿಸಿ ಪ್ರೀಯದಿ
ಉರುತರದ ಕಲ್ಪೋಕ್ತದಿಂದಲಿ ಪೂಜಿಸಿರಿ ಎನುತಾ ೪೫

ಅರುಹಿ ಕನಸಿನ ಪರಿಯ ಶಿಷ್ಯರ
ವೆರಸುತಚ್ಚರಿಪಡುತಲೊಡನೆ
ಭರದಿ ಬಂದರು ಯದುಗಿರಿಗೆ ಶ್ರೀಹರಿಯನರಸುತ್ತಾ
ಉರುತರದ ಕಾನನವ ಕಾಣುತ
ನರಹರಿಯ ಶಿಖರದ ಮನೋಹರ
ದಿರವನೀಕ್ಷಿಸಿ ಬೆರಗುವಡೆಯುತ ಬಂದರೆತಿ[3]ರಾಜರ್[3] ೪೬

ಬಳಿಕಲಾ ಯತಿವರರು ಯದುಕುಲ
ತಿಲಕ ನಾರಾಯಣನ ಹುಡುಕುತ
ತುಳಿಯುತಲಿ ಕಲ್ಮುಳ್ಳುಗಳ ಬಳಲುತಲಿ ಎವ್ವಡತಲಿ

---

1 ನಮ್ಮೀ (ಕ). 2. ಹರುಷದಲೀ (ಚ). 3. ವರರೂ (ಕ).

Funding: Tattva Heritage Foundation,Kolkata. Digitization: eGangotri.

ಕೆಲಬಲದ ಮುಳ್ಳಿಡಿದ ಕಿರುತರು
ಗಳು ತನುವಿನೊಳು ಸೋಕುತಿರ
ಲಾ ಲತೆಗಳನು ಬಿತ್ತರಿಸಿ ನಡೆದರು ಯದುಗಿರಿಯ ವನದೀ ೪೭

ಎಳೆರವಿಯ ತೇಜದಲಿ ಮೆರೆಯುವ
ಬಳುಕುತಿಹ ಸುಕುಮಾರವಪುವೊಳು
ಜಿಲಜಿಲನೆ ಸುರಿಯುತಿಹ ಕೆನ್ನೀರುಗಳನೊರೆಸುತಲೀ
ಬಳಸುತಿಹವರಂಜನರ ಮನ್ನಿಸು
ತಲೆ ಹರಿಯ ನೆರೆ ಹುಡುಕುತಿರಲಾ
ತುಲಸಿವನವದು ಗೋಚರಿಸಿತೇನೆಂಬೆನಚ್ಚರಿಯಾ ೪೮

ಇಂತು ಸಕಲಸ್ವವಿದಿತ-ಸಂಸ್ಕೃತವೇದಪಾರಾವಾರಪಾರೀಣ-ಸ್ಮೃತೀತಿಹಾಸಾಗಮಾದಿ-ಸಕಲಶಾಸ್ತ್ರಸಂಪತ್ಸಂಯುಕ್ತ-ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯೋಭಯವೇದಾಂತಪ್ರವರ್ತನಾಚಾರ್ಯೇತ್ಯಾದಿ-ಸಾರ್ಥಕವಿಶೇಷಣವಿಶಿಷ್ಟ-ಶ್ರೀಶೇಷಾಂಶಭೂತಾಖಿಲಜಗದೇಕಾಚಾರ್ಯ-ಶ್ರೀರಾಮಾನುಜಾರ್ಯಾಪರಾವತಾರಭೂತ-ಶ್ರೀಗೋಮಠಂಶ್ರೀಯತೀಂದ್ರಪ್ರವಣಸಂಭೋದ್ಭವ-ಶ್ರೀಮನ್ನೃಸಿಂಹಾರ್ಯಪಾದಾಶ್ರಿತ-ಶ್ರೀರಾಘವಾರ್ಯಚರಣಕಮಲಚಂಚರೀಕೆಯುಂ, [1]ಯದ್ವದ್ರಿನಿವಾಸರಸಿಕೆಯುಂ[1] ಕವಿಕುಲಮನಸ್ಸರೋಜನೀರಾಜಹಂಸಿಯುಂ,- ಆದ,

ಶ್ರೀ ಶ್ರೀರಂಗನಾಯಕೀವಿರಚಿತಮಪ್ಪ,

ಶ್ರೀಯದ್ವದ್ರೀಶಚರಿತಮಹಾಕಾವ್ಯದೊಳು

ಶ್ರೀರಾಮಾನುಜಾರ್ಯಾವತಾರಾದಿಕತದ್ಯದುಗಿರಿದಿವ್ಯಸ್ಥಲಸ್ಥಶ್ರೀನಾರಾಯಣಾಂತರ್ಗತತುಲಸೀವನಮಧ್ಯಸ್ಥ-ವಲ್ಮೀಕದರ್ಶನಾಂತಕಥಾವಿವೇಚನಸಂಧಿಯುಂ

ಸಮಾಪ್ತಂ

1. ಈ ಭಾಗ ಕೈಪ್ರತಿಯಲ್ಲಿ ಮಾತ್ರ ಇದೆ.

ಶ್ರೀ ಭಾಷ್ಯಕಾರರ

ಶ್ರೀಸಿಂಹಭೂಧರದರ್ಶನ–ಶ್ರೀನಾರಾಯಣಾರ್ಚನಾದಿ

ವಿವರಣ ಸಂಧಿ

ಸೂಚನೆ:– ಮುನಹರುಷದಲಿ ಭಾಷ್ಯಕಾರರು
ನೆನೆದು ಯದುಗಿರಿನಾಥನರುದಹಿ
ಇನಿಯವಚನವ ಶಿರದೊಳಾನುತ ಹರಿಯನರ್ಚಿಸಿದರ್॥

ನಳನಳಿಪ ನವನಳಿನತುಲಸೀ
ಚಲುವಮಣಿಮಾಲೆಯನು ಧರಿಸುತ
ಬಿಳಿಯನಾಮವ ತಳೆದು ಫಣೆಯೊಳು ಎಳೆರವಿಯ ಪೋಲುತಲೀ
ಥಳಥಳಿಪ ಕೋಮಲತ್ರಿದಂಡವು
ಪೊಳೆಯುತಿರೆ ಶ್ರೀಹರಿಯ ವಿಭವವ
ಇಳೆಗೆ ತೋರಿದ ಭಾಷ್ಯಕಾರರ ಚರಣಕೆರಗುವೆನೂ ೧

ಹರಿಯ ಮಹಿಮೆಯನರುಹಿ ಧರಣಿಗೆ
ನರರನುದ್ಧರಿಸುತಲಿ ಹರುಷದಿ
ವರವಕುಳಾಭರಣನೆಂದೆನಿಸಿರ್ಪ ಸುರುಚಿರದಾ
ಮೆರೆಯುತಿರುತಿಹ ವಕುಳಮಾಲೆಯ
ಧರಿಸಿ ಕೊರಳೊಳು ಕರಮುಗಿಯುತ
ಹರಿಯ ಚರಣವ ತೋರಿಸಿದ ಗುರುಚರಣಕೆರಗುವೆನೂ ೨

ಬಂದರಾ ಯತಿವರರು. ಶಿಷ್ಯರ
ವೃಂದವನುವೆರಸುತಲಿ ಯದುಗಿರಿ
ಗಂದು ತೊಂಡನ ಊರ ಬಿಡುತಲಿ ಸ್ತುತಿಸುತಲಿ ಹರಿಯಾ
ಮುಂದೆ ಬರುತಿರೆ ನರಹರಿಯ ಗಿರಿ
ಯಂದು ಕಾಣಲು ಬೆರಗುವಡೆಯುತ
ಇಂದಿರೇಶನ ಅರಸುತಲಿ ಚರಿಸಿದರು ವಿಪಿನದಲೀ ೩

ಬಳಿಕಲಾ ಯತಿವರರು ಯದುಕುಲ
ತಿಲಕ ನಾರಾಯಣನ ಅರಸುತ
ತುಳಿಯುತಲಿ ಕಲ್ಮುಳ್ಳುಗಳ ಬಳಲುತಲಿ ಎಡವುತ್ತಲೀ
ಕೆಲಬಲದ ಪುಳ್ಳಿಡಿದ ಕಿರುತರು
ಗಳು ತನುವಿನೊಳು ಸೋಕುತಿರ
ಲಾ ಲತೆಗಳನು ಒತ್ತರಿಸಿ ನಡೆವರು ಹರಿಯ ಸ್ಮರಿಸುತಲೀ ೪

ಎಳರವಿಯ ತೇಜದಲಿ ಮೆರೆಯುವ
ಬಳುಕುತಿಹ ಸುಕುಮಾರವಪುವೊಳು
ಜಲಜಲನೆ ಸುರಿಯುತಿಹ ಕಣ್ಣೀರುಗಳನೊರಸುತಲೀ
ಬಳಲುತಿಹ ಪರಿಜನರ ಮನ್ನಿಸು
ತಲೆ ಹರಿಯು ನೆರೆ ಹುಡುಕುತಿರಲಾ
ತುಲಸಿವನವದು ಗೋಚರಿಸಿತೇನೆಂಬೆನಚ್ಚರಿಯಾ ೫

ಬರುತಿರಲು ಕಲ್ಮುಳ್ಳ ತುಳಿಯುತ
ಚರಣಕಮಲದಿ ಸುರಿವ ನೆತ್ತರ
ಪರಿಕಿಸದೆ ಲೆಕ್ಕಿಸದೆ ಮರುಗದೆ ನೋವನರಿಯದಲೀ
ತಿರುಗಿದರು ಯದುಗಿರಿಯ ವನದಲಿ
ಸ್ಮರಿಸಿದರು ಶ್ರೀಹರಿಯ ವಚನವ
ಮರುಗಿದರು ಕರುಣಾಳು ಮೈದೋರೆನುತ ಹಲುಬುತಲೀ ೬

ಹರಿಯು ಪೇಳಿದ ಕುರುಹು ಕಾಣದು
ಪರಿಯಿದಕೆ ನಾನೇನಗೈವೆನು
ದರುಶನವ ಕರುಣಾಕರನೆ ನೀಡೆನುತ ಬೇಡುತಲೀ
ಪರಿಮಳದ ಕಂಪುಗಳನೆರಚುವ
ಸರಸಿಜದ ಸರಸಿಗಳ ತಟದೊಳು
ವರತುಲಸಿವನಗಳೊಳು ತರುಲತೆಗಳೊಳು ಅರಸುತಲೀ ೭

ಮರುಗುವರು ಹಂಬಲಿಸುವರು ಕಾ
ತರಿಸುವರು ತೊಳಲುವರು ಬಳಲುತ
ಹರಿಯಿರವ ಕಾಣದೆ ನೆಲೆಯ ತಿಳಿಯದೆ ಚರಿಸಿದರು ಬಿಡದೇ
ಕುರುಹುಗಳ ತಿಳಿಯುತಲರುಹುವರು
ಪರಿಜನರ ಮನ್ನಿಸುತ ನಡೆದರು
ಸರಸಿಜನ ನಿಜಪಿತನೆ ನೀನೆಲ್ಲಿರುವೆ ಪೇಳನುತಾ ೮

ನೊಂದುಮನದೊಳು ಇಂದಿರೇಶನು
ಅಂದವಚನವು ತಪ್ಪದೆಂದಿಗು
ಎಂದೆನುತ ಪರಮಾರ್ಥತತ್ವವ ನೆನೆದು ಬೆರಗಾಗೀ
ಅಂದು ಕನಸಿನೊಳಿತ್ತ ದರುಶನ
ದಿಂದೆನಗೆ ನೀನೇಕೆ ಈಯದೆ
ಇಂದು ಪರಿಕಿಪೆಯೇಕೆನುತಲೊರಲಿದರು ಅಡಿಗಡಿಗೇ ೯

ವೇದಪುಷ್ಕರಣಿಯನು ಕಾಣುತ
ಲಾದರದೊಳಾ ಪುಣ್ಯತೀರ್ಥದೊಳ್
ಮೋದದಿಂದಲಿ ಮಿಂದು ಕಾಷಾಯ ತ್ರಿದಂಡಗಳಾ
ಮಾಧವನ ಕೊಂಡಾಡಿ ಧರಿಸುತ
ವೇದದರ್ಥವನರುಹಿದೀ ಸ್ಥಳ
ಮೇದಿನಿಯೊಳು ಪವಿತ್ರವಿದು ಎಂದೆನುತ ಪೊಗಳುತಲೀ ೧೦

ಪರಿಪರಿಯ ಗಿರಿಗುಹೆಗಳನು ನರ
ಹರಿಯ ಗಿರಿಶಿಖರದ ಮನೋಹರ
ದಿರವ ನೋಡುತ ತರುಲತೆಗಳನು ಒತ್ತರಿಸುತಾಗಾ
ಬರುತಿರಲು ವರತುಲಸಿಗಿಡವದು
ಉರುತರದಿ ಎಸೆದಿರಲು ಮಂಗಳ -
ತರದ ವಲ್ಮೀಕವನು ಕಂಡತಿಮುದವ ಗೊಳ್ಳುತಲೀ ೧೧

ಹಿರಿಯವಲ್ಮೀಕವಿದು ಹರಿಯಿಹ
ಪರಿಯ ಚಿಹ್ನೆಯು ತೋರುತಿದೆ
ವರ ಯದುಗಿರೀಶನ ಮಧುರವಾಣಿಯು ಫಲಿಸಿತೆಂದೆನುತಾ
ತೆರಳಿದರು ಉತ್ತರದ ದೆಸೆಯೊಳು
ಮೆರೆವ ಕಲ್ಯಾಣಿಯನು ಕಾಣುತ
ವರಹದೇವರ ಚರಣಕಭಿವಂದಿಸುತ ಹರುಷದಲೀ ೧೨

ಧರಿಸಿದರು ವಿಮಲೋರ್ಧ್ವಪುಂಡ್ರವ
ಇರದೆ ಗದ್ಯತ್ರಯದ ಯಾಮುನ
ಗುರು[1]ವರ[1] ಸ್ತುತಿಗಳನು ಪಠಿಸುತಾನಂದವಾನುತಲೀ
ತರುತ ಶುದ್ಧೋದಕವ ಮಾಧವ
ನಿರುವ ವಲ್ಮೀಕದೊಳು ಎರೆಯುತ
ಲಿರಲು ಕಂಡರು ವರದತಿರುನಾರಾಯಣನ [2]ಆಗಾ[2] ೧೩

ಜಯ ನಮೋ ಜಗದಾದಿಕಾರಣ
ಜಯ ನಮೋ ವರಲಕುಮಿರಮಣ
ಜಯ ನಮೋ ಪರವಾಸುದೇವನೆ ಪರಮಮಂಗಳನೇ
ಜಯ ನಮೋ ಸರಸಿಜದಳಾಂಬಕ
ಜಯ ನಮೋ ಸುರವರಕರಾರ್ಚಿತ
ಜಯ ನಮೋ ಮುನಿಮಾನಸಾಂಬುಜವಾಸ ಜಗದೀಶ ೧೪

ಇದುವೆ ತಿರುನಾರಾಯಣನು ತಾ
ಒದಗಿ ಪೇಳಿದ ಹಿರಿಯ ಹುತ್ತವು
ಇದೆಯೆ ತುಲಸೀಗಿಡವು ಬೆಳೆದಿಹ ಕುರುಹಿದೇ ನಿಜವೂ
ಇದೆಯೆ ದಕ್ಷಿಣಬದರಿಕಾಶ್ರಮ
ಇದೆಯೆ ತಿರುನಾರಾಯಣಾದ್ರಿಯು
ಇದೆಯೆ ಯದುಕುಲತಿಲಕನಾಡಿದ ಯಾದವಾಚಲವೂ ೧೫

1 ವಿರಚಿತದವು (ಕ) 2. ಬೇ (ಕ)

ಕಂಡೆ ನಾಸೀ ಶಾಮಲನ ಉ
ದಂಡವಿಕ್ರಮಬ್ರಹ್ಮವಂದ್ಯನ
ಪುಂಡರೀಕಾಯತಸುನೇತ್ರನ ಮಂಗಳಾತ್ಮಕನಾ
ಕಂಡೆ ಋಮಿಜನವೃಂದಸ್ತುತ್ಯನ
ಕಂಡೆ ಕರುಣಾಕರನ ವಿಮಲನ
ಕಂಡೆ ಸುಂದರಯಾದವಾದ್ರಿಯ ಸಿರಿಯ ನಾರಣನಾ ೧೬

ಬಾಲನಾಗುತ ಪಾಲಕಡಲೊಳು
ಲೀಲೆಯಿಂದಲಿ ಲಕುಮಿಯೊಡನಾ
ಮಲಗಿದೆನು ನೀವೆಮ್ಮ ಶಯ್ಯಾಸನವು ಆಗುತಲೀ
ತಾಳಿ ತಾಯ್ತನದಿಂದಲೆನ್ನನು
ಲೀಲೆಯೊಳು ತೂಗುತಲಿ ನಲಿಯುವ
ಲೀಲಾಮಾನುಷವಿಗ್ರಹರೆ ನೀವೆನಗೆ ಪಿತನಹುದೊ ೧೭

ಅಂದು ದೇವಕಿಯುದರದೊಳು ಗೋ
ವಿಂದ ಪುಟ್ಟಿದ ತೆರದೊಳೀಗಲೆ
ಇಂದು ಈ ವಲ್ಮೀಕ[1]ದಿಂದು[1]ದಿಸಿದೆನು ಮುದವಾಂತೂ
ಬಂದು ಉದ್ಧರಿಸಿದಿರಿ ಎನ್ನನು
ತಂದೆ ನೀವದರಿಂದಲೀಗಲಿ
ಎಂದು ಕೊಂಡಾಡಿದನು ಮುರಹರ ಭಾಷ್ಯಕಾರರನು ೧೮

ತೋರಿದಿರಿ ಧರೆಗೆನ್ನ ನೀಗಲೆ
ತೋರಿದಿರಿ ತತ್ವಾರ್ಥವೆಲ್ಲವ
ತೋರಿದಿರಿ ಭೂವೈಕುಂಠವಿದು ಎಂದೆನುತ ಮನುಜರಿಗೇ
ತೋರಿದಿರಿ ನಿಗಮಾರ್ಥಸಾರವ
ತೋರಿದಿರಿ ಲೀಲಾವಿಭೂತಿಯ
ತೋರಿದಿರಿ ಎನ್ನೀ ಬಗೆಯ ನಿತ್ಯೈಶ್ವರ್ಯವಿಭವಗಳಾ ೧೯

---

1. ದೊಳು (ಖ)

ತೊಳಲಿದಿ ಕಾನದದಿ ಎಲ್ಲೆಡೆ
ತ್ರೊಳಲಿದಿರಿ ಅರಸುತಲಿ ಎನ್ನನು
ಕಳವಳದಿ ಯದುಗಿರಿಯೊಳಿಲ್ಲೆಡೆಯಲೆದ ಕಾರಣದಿಂ
ಹೊಳೆವ ಎಳೆರವಿಯನ್ನು [1]ಹೋ[1]ಲುವ
ಲಲಿತವಾಗಿಹ ನಿಮ್ಮ ಕಾಯವು
ಕಳೆಯ ಗುಂದಿದೆ ಎನುತ ಮರುಗಿದ ಕರುಣಮೂರುತಿಯೂ ೨೦

ಪರಮಕಲ್ಯಾಣಗುಣಪೂರ್ಣನ
ಪರಮಪುರುಷನ ಸಿರಿಯರಮಣನ
ದರುಶನವ ಮಾಡುತಲಿ ಶ್ರೀಯತಿವರರು ನಲಿಯುತಲೀ
ಕಂಮುಗಿದು ಶಿರಬಾಗಿ ನಮಿಸುತ
ವರದತಿರುನಾರಣನೆ ಮುದದಿಂ
ಶರದೆನಗೆ ದರುಶನವನಿತ್ತಿರಿ ಎಂದು ಸ್ತುತಿಸಿದರೂ ೨೧

ಎನುತ ಕೊಂಡಾಡುತಲಿ ಶ್ರೀಹರಿ
ಗನುನಯದಿ ನಮಿಸುತಲಿ ತನ್ನಯ
ತನುವ ಚಾಚುತ ಪದಯುಗವ ಪಿಡಿದೆರಗತಿಭಕ್ತಿಯಲೀ
ಮನದೊಳಾನಂದಿಸುತ ತ್ವರಿತದಿ
ಮನವೊಲಿದು ಕಲ್ಯಾಣಿತೀರ್ಥದಿ
ವನಜನಾಭಗೆ ಮಜ್ಜನವ ಮಾಡಿದರು ಅರ್ತಿಯಲೀ ೨೨

ವಾರಿಜಾಕ್ಷನ ಸೊಬಗ ನೋಡುತ
ಮೂರುದಿನವಾರಾಧಿಸುತ ಬಹು
ಮೀರಿದಾನಂದದಲಿ ಕರಸಿದರು ಅರ್ಚಕರನಾಗಾ
ಚಾರುತರವಿಭವದಲಿ ಅರ್ಚಿಸಿ
ಪಾರಮಾರ್ಥದ ತತ್ತ್ವಗಳ ಮನ
ಸಾರ ಭಜಿಸುತ ಸ್ತುತಿಸಿದರು ತಿರುನಾರಣನ ಮುದದಿಂ ೨೩

---

1. ಪೋ (ಕ)

ಪೂಜಿಸಿದರಾ ಯತಿವರರು ರವಿ
ತೇಜತಿರುನಾರಾಯಣನ ಪದ
ರಾಜೀವಗಳಿಗಭಿವಂದಿಸುತ ಬಹುಭಾವಭಕ್ತಿಯಲೀ
ಜಾಜಿಮಲ್ಲಿಗೆತುಲಸಿಸುಮಗಳ
ರಾಜಿಸುವ ಮಣಿಹಾರ ಪ್ರೋಳಿಯುವ
ಮೂಜಗವ ಮೋಹಿಸುವ ತಿರುನಾರಾಯಣನ ಒಲವಿಂ ೨೪

ಪಂಚವಿಧಭಕ್ಷ್ಯಗಳ ಭೋಜ್ಯವ
ಪಂಚಬಾಣನ ತಾತಗರ್ಪಿಸಿ
ವಂಚಿಸದೆ ಭಕ್ತರಿಗೆಲ್ಲರಿಗೆ ವಿನಿಯೋಗವಂ ಮಾಡಿ
ಚಿಂತಿತಾರ್ಥವನೀವ ಯದುಗಿರಿ
ಚಂಚಲಾಕ್ಷಿಯ ಲಕ್ಷ್ಮಿಯರಸನ
ಇಂತರದಿ ಸ್ತುತಿಸಿದರು ನಿಗಮಾಳಿಗಳ[1] ಸ್ತುತಿಗಳೊಳೂ[1] ೨೫

ದ್ರಾವಿಡಾಮ್ನಾಯದೊಳು ಮಿಗಿಲೆನೆ
ಸಾವಿರದ ಪದ್ಯದೊಳು ಮೆರೆಯುವ
ಶ್ರೀವರನ ತಿರುನಾರಾಯಣನ ಮಹಿಮೆಯನು ಬಣ್ಣಿಸುತಾ
ಕೋವಿದರು ಮನವೊಲಿದು ಪಾಡುವ
ಭಾವಭಕ್ತಿಯ ಹತ್ತುಪದ್ಯವ
ಸ್ವಾಮಿ ತಿರುನಾರಾಯಣನಿಗರ್ಪಿಸಿ ಪೂಜಿಸಿದರಾಗಾ ೨೬

ಕರಸಿದರು ಶ್ರೀರಂಗದಿಂದಲಿ
ಮೆರೆವ ವಿಪ್ರೋತ್ತಮರ ಶಿಷ್ಯರ
ಕರೆಸಿದರು ಐವತ್ತೊರಬರುವರೆಂಬುವ ಬುಧಜನರಾ
ಕರಿಸಿದರು ಅರ್ಚಕರ ವರಪರಿ
ಚಾರಕರರ ಪರಿಜನರೆಲ್ಲರ
ಹರಿಯನಾರಾಧಿಸಲು ಹರುಷದಿ ಲಕ್ಷ್ಮಣಾರ್ಯರು ತಾವ್ ೨೭

---

1. ಬೆರಗಾಗೇ (ಕ)

ವರದತಿರುನಾರಾಯಣಗೆ ಪರಿ
ಪರಿಯ ನಿತ್ಯದ ಪಕ್ಷಮಾಸದ
ಮೆರೆವ ಸಂವತ್ಸರದ ಉತ್ಸವಗಳನು ಮಾಡಿಸಲೂ
ಮೆರೆವ ಉತ್ಸವವಿಗ್ರಹವು ತಾ
ನಿರದಿರಲು ಮನದೊಳಗೆ ಅಳಲುತ
ಕರುಣನಿಧಿ ಶ್ರೀಯದುಗಿರೀಶನ ಧ್ಯಾನಿಸುತಲಿರಲೂ ೨೮

ಭರದಿ ಪೇಳಿದ ಕನಸಿನೊಳು ಯತಿ
ವರರಿಗತಿಹರುಷದೊಳು ಯದು
ಗಿರಿಯೊಡೆಯತಿರುನಾರಾಯಣನು ವರಮಂದಹಾಸದೊಳೂ
ಮರುಗದಿರಿ ಯತಿಸಾರ್ವಭೌಮರೆ
ಅರಸನರಮನೆಯೊಳಗೆ ಡಿಲ್ಲಿಯೊ
ಳಿರುವ ಉತ್ಸವವಿಗ್ರಹವ ನೀವ್ ತರುವುದೆಂದೆನುತಾ ೨೯

ಅಚ್ಚರಿಯ ಪಡುತಾಗ ಯತಿವರ
ರೆಚ್ಚರವ ಗೊಳ್ಳುತಲಿ ಮುದದಿಂ
ದಚ್ಯುತನ ವರಮಧುರವಾಣಿಯ ನೆನೆನೆನೆದು ಮನದೀ
ಸ್ವಚ್ಛವಾದುದಕದಲಿ ಮೀಯುತ
ಹಚ್ಚಿದರು ವರ ಊರ್ಧ್ವಪುಂಡ್ರವ
ಮೆಚ್ಚಿ ನಡೆದರು ಡಿಲ್ಲಿಯ ನಗರಕೆ ಹರಿಯ ಆಜ್ಞೆಯಲೀ ೩೦

ಬಂದು ಡಿಲ್ಲಿಯ ನಾಥನರಮನೆ
ಮುಂದೆ ನಿಲ್ಲಲು ದ್ವಾರಪಾಲಕ
ರಂದು ನಡೆತಂದಾಗ ಬಾದರ್ಷಹಗೆ ಬಿನ್ನವಿಸೇ
ನಿಂದ ಯತಿರಾಜರನು ಕರಸುತ
ಬಂದು ತವಕದಿ ಭೂವರನು ತಾ
ತಂದುವಸ ಕುಶಲವನು ಕೇಳಿದ ಭಾಷ್ಯಕಾರರನೂ ೩೧

Funding: Tattva Heritage Foundation,Kolkata. Digitization: eGangotri.

ಯಾರು ನೀವೆತ್ತಿವರರೆ ಇಲ್ಲಿಗೆ
ಸಾರಿಬಂದ ನಿಮಿತ್ತವೇನಿದು
ದಾರನುತಿ ನೀವೆನಗೆ ತಿಳುಪುದು ನಿಮ್ಮ [1]ಕಾರಿಯವಾ[1]
ತೋರುತಿದೆ ಎಳೆರವಿಯ ತೇಜವು
ತೋರುತಿದೆ ಶುಭಲಕ್ಷಣಂಗಳು
ಮೀರಿದಾಯಾಸದಲಿ ತನುಬಳಲಿಹುದು ಕಳೆಗುಂದಿ ೩೨

ಕೇಳು ಡಿಲ್ಲಿಯನಾಥ ನಿನ್ನಯ
ಆಲಯದೊಳಿದುಗಿರಿಯ ಉತ್ಸವ
ನೀಲದಳಲೋಚನನು ಚಲುವನಾರಾಯಣನು ಇಹನೂ
ಮೇಲೆನಿಪ ಆ ದಿವ್ಯಮೂರ್ತಿಯ
ಲೀಲೆಯಿಂದಲಿ ಈವುದೆನಗೆ ವಿ
ಶಾಲಮತಿ ಕೇಳೆಂ [2]ದರುಹಿ[2]ದರು ಯತಿವರರು ನಸುನಗುತಾ ೩೩

ಎನಲು ಮನಹರುಷವನು ತಾಳುತ
ಜನಪ ಯತಿವರರೊಡನೆ ನಡೆದನು
ಘನತರದ ಕೋಶಾಗಾರದಲಿ ವಿಗ್ರಹಗಳಿರುವೆಡೆಗೇ
ದಿನಕರನ ಪೋಲುತಿಹ ತೇಜನ
ಕನಕವಸನನ ಯದುಗಿರೀಶನ
ಕನಕಮಾಲಿನಿಪೂಜಿತನ ಅರಸಿದರು ಯತಿರಾಜರ್ ೩೪

ಕಾಣೆ ಯದುಗಿರಿನಾಥನಿರುತಿಹ
ತಾಣವನು ನಾನೇನಗೈವೆನು
ಕೇಣವನು ತೋರಿದನೆ ತಿರುನಾರಾಯಣನು ಎನಗೇ
ಕಾಣೆನೊಂದನು ನೊಂದೆ ಮನದೊಳು
ಏಣಲೋಚನನೆಲ್ಲಿ ಇರುವನೋ
ಮಾಣದರಸಿದರೆನಗೆ ದೊರೆಯನು ಯದುಗಿರಿಯ ನಾಥಾ ೩೫

---

1 ಭೀಪ್ಸುರನೂ (ಕ). 2. ಮುಸುರಿ (ಕ)

ಅರಸಿದಡು ಸಿರಿಯರಸನನು ಸಂ
ಪರಿಯೊಳಾಲೋಚಿಸುತ ಯತಿವರ
ರರಸನಾಲಯದೊಳಗೆ ಕೋಶಾಗಾರದಲಿ ಬಿಡದೆ
ದೊರೆಯದಿರೆ ಸಿರಿಚಲುವರಾಯನು
ಪಂಗುಗುಂಕಲಿ ಒಳಲುತಲಿ ಏಳುತ
ಲಿರಲು ಪೇಳಿದ ನಗುತ ಶ್ರೀಹರಿ ಭಾಷ್ಯಕಾರರಿಗೆ ೩೫

ಇರುವೆನರಸನ ಕುವರಿಯಂತಃ
ಪುರದಿ ವಿವಿಧದ ವೈಭವದ ಉಪ
ಚಾರದೊಳಗಿರುವೆನೆನ್ನನು ಕರೆದುಕೊಂಡರ
ಬರುವೆನಲಸದೆ ಯದುಗಿರಿಗೆ ನೀ
ವಿಂದೆ ಕೊಂಡೊಯ್ಯುವುದು ಎನ್ನನು
ವಿರಚಿಪುದು ಎನಗಾಗಮೋಕ್ತದ ಉತ್ಸವಂಗಳನೂ ೩೬

ಹರಿಯ ವಚನವ ಕೇಳಿ ಯತಿವರ
ಬೆರಗುವಡೆಯುತ ಮನದೊಳಗೆ ತಾ
ಕರುಣನಿಧಿ ಶ್ರೀರಾಮಪ್ರಿಯನ ಧ್ಯಾನಿಸುತಲಾಗ
ಭರದಿ ಕರೆದರು ಸ್ತುತಿಯ ಮಾಡುತ
ಪರಮಪುರುಷನ ಯದುಗಿರೀಶ
ಪರಮಭಕ್ತಿಯೊಳಾಗ ಕರಮುಗಿಯುತಲಿ ಮನವೊಲಿದು ೩೭

ಎಲ್ಲಿರುವೆ ಬಾ ಯದುಗಿರಿಯ ಸಿರಿ
ನಲ್ಲ ಚಲುವನಾರಾಯಣನೆ ನೀ
ನಿಲ್ಲದಿಹ ಸ್ಥಳವೆಲ್ಲಿಹುದು ನಾನರಿಯೆ ನೋಡಿಯಿಡುವೆ
ನಿಲ್ಲದಲಸದೆ ಬಂದು ನಿನಯ್ನ
ಸೊಲ್ಲ ಸಾರ್ಥಕಗೊಳಿಸು ಮುರಹರ
ಬಲ್ಲೆಯಲ್ಲವ ಸಕಲಜಗದಧಿನಾಥ ಸುರುಚಿರನೆ ೩೮

ಬೇಗ ಬಾರೈ ರಾಮಪ್ರಿಯನೆ
ಕೂಗಿ ಕರೆಯುವೆ ನಿನ್ನ ಕರುಣದೊ
ಳೀಗ ತೋರ್ಸೈ ಕೃಪೆಯ ಶ್ರೀವೈಕುಂಠನಾಥನೆ ನೀ
ಬಾಗಿ ನಮಿಸುವೆ ಕರವ ಮುಗಿಯುತ
ಸಾಗಿ ಬಾರೈ ಭಕ್ತವತ್ಸಲ
ಆಗಮಾರ್ಚಿತ ಯಾದವಾದ್ರಿಯ ಚಲುವನಾರಣನೆ ೩೯

ಕೂಗಿ ಕರೆದರೆ ದಯವು ಬಾರದೆ
ನಾಗಶಯನನೆ ತಡವು ಮಾಡದೆ
ಈಗ ಪರಿಕಿಸದೆನ್ನ ನಡೆತಂದೆದುರಿನೊಳು ನಿಲ್ಲೈ
ಆಗಮಾದಿಸ್ತುತಿಗಳಿಂದಲಿ
ಬೇಗ ಅರ್ಚಿಸಿ ಮುದವ ಪೊಂದುವೆ
ಸಾಗಿಬಾರೈ ಪರಮಪುರುಷನೆ ಯದುಗಿರಿಯ ಒಡೆಯಾ ೪೦

ಎಂದು ಕರೆಯಲು ನೊಂದು ಮನಸೊಳು
ಇಂದಿರೇಶನು ದಯವ ತೋರುತ
ಬಂದನಾಗಲೆ ಮಂದಗಮನದಿ ಅಡಿಯನಿಕ್ಕುತಲಿ
ಮುಂದೆ ಕುಳಿತಿಹ ಭಾಷ್ಯಕಾರರ
ಮಂದಹಾಸದಿ ನಿಂದು ನೋಡುತ
ಬಂದು ಕುಳಿತನು ತಂದೆಯೆನ್ನುತ ತೊದಲುಮಾತಿನಲಿ ೪೧

ಮಂಗಳಂ ಯತಿಸಾರ್ವಭೌಮಗೆ
ಮಂಗಳಂ ಶ್ರೀಲಕ್ಷ್ಮಣಾರ್ಯಗೆ
ಮಂಗಳಂ ಶ್ರೀಕಾಂತಮತಿಸುಕಸಾರಪಂಜರಗೆ
ಮಂಗಳಂ ಶ್ರೀಭಾಷ್ಯಕಾರಗೆ
ಮಂಗಳಂ ರಾಮಾನುಜಾರ್ಯಗೆ
ಮಂಗಳಂ ಶ್ರೀಭೂತಪುರಿನಾಯಕಶೇಷಾನುಜಗೆ ೪೨

ಮಂಗಳಂ ಶ್ರೀರಾಮಪ್ರಿಯಗೆ
ಮಂಗಳಂ ಸಂಪತ್ಕುಮಾರಗೆ
ಮಂಗಳಂ ಶ್ರೀಕನಕಮಾಲಿನಿಪೂಜಿತನಗೆ ಹರಿಗೆ
ಮಂಗಳಂ ಯತಿರಾಜಕುವರಗೆ
ಮಂಗಳಂ ಯದುಶೈಲದೀಪಗೆ
ಮಂಗಳಂ ಶ್ರೀರಾಮಕೃಷ್ಣಾರ್ಚಿತಗೆ ಸುಂದರಗೆ ೪೩

ಇಂತು ಸಕಲ-ದ್ರಾವಿಡ-ಸಂಸ್ಕೃತವೇದಸಾರಾವಾರಪಾರೀಣ-ಸ್ಮೃತೀತಿಹಾಸಾಗಮಾದಿಸಕಲಶಾಸ್ತ್ರಸಂಪತ್ಸಂಯುಕ್ತ-ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯೋಭಯವೇದಾಂತಪ್ರವರ್ತನಾಚಾರ್ಯೇತ್ಯಾದಿ-ಸಾರ್ಥಕ
ವಿಶೇಷಣವಿಶಿಷ್ಟ-ಶ್ರೀಶೇಷಾಂಶಭೂತಾಖಿಲಜಗದೇಕಾಚಾರ್ಯ
ಶ್ರೀರಾಮಾನುಜಾರ್ಯಾವತಾರಭೂತ-ಶ್ರೀಗೋವಿಂದ
ಶ್ರೀಯತೀಂದ್ರಪ್ರವಣವಂಶೋದ್ಭವ-ಶ್ರೀನೃಸಿಂಹಾರ್ಯ
ಪಾದಾಶ್ರಿತ-ಶ್ರೀಶೈನಾರ್ಯ-ಚರಣಕಮಲಚಂಚರೀಕೆಯುಂ,
ಕವಿಕುಲಮನಸ್ಸರೋಜಿನೀರಾಜಹಂಸೆಯುಂ,
ಆದ,- ಶ್ರೀಃ ಶ್ರೀರಂಗನಾಯಕೀ
ವಿರಚಿತಮಪ್ಪ,-

ಶ್ರೀ ಯದ್ವದ್ರೀಶಚರಿತಮಹಾಕಾವ್ಯದೊಳ್

ಶ್ರೀರಾಮಾನುಜಾರ್ಯಕೃತಸಿಂಹಭೂಧರದರ್ಶನ-ವೇದಪುಷ್ಕರಿಣೀಮಹಿಮಾನುಸಂಧಾನ-ವಲ್ಮೀಕೋದ್ಧಾರಾನಂತರಕ್ಷೀರಾಭಿಷೇಕಪೂರ್ವಕ
ಶ್ರೀನಾರಾಯಣಾರ್ಚನ-ತದಾಜ್ಞಾನುಸಂಧಾನಪೂರ್ವಕಡಿಲ್ಲೀನಗರಗಮನ-
ಡಿಲ್ಲೀಶಕುಮಾರಿಕಾಂತಃಪುರಸ್ಥಪ್ರೇಮಪುತ್ರಸ್ವರೂಪಸಮಾಗತ-
ರಾಮಪ್ರಿಯಮಂಗಳಾಶಾಸನಕರಣಾದಿಕಥಾವಿಶೇಷಸಂಧಿಯುಂ

ಸಮಾಪ್ತಂ.

ಶ್ರೀ ಭಾಷ್ಯಕಾರಕೃತ

ರಾಮಪ್ರಿಯಸಾನಯನ–ಉತ್ಸವಮೂರ್ತಿಪ್ರತಿಷ್ಠಾಪನ ಪೂರ್ವಕ–ಶ್ರೀನಾರಾಯಣನಿತ್ಯೋತ್ಸವಾದಿ ನಿಯಮನಪೂರ್ವಕ ಮಂಗಳಾಶಾಸನಾದಿ

ವಿವರಣಸಂಧಿ

ಸೂಚನೆ:—

ಪರಮಪುರುಷನ ಚಲುವರಾಯನ
ಭರದಿ ವರರಾಮಾನುಜಾರ್ಯರು
ಕರೆದು ಕರೆತಂದರು ಸುರನರರು ಬೆರಗಾಗೆ ಯದುಗಿರಿಗೆ

ಕರೆದ ವರರಾಮಾನುಜಾರ್ಯರ
ಮೊರೆಯ ಕೇಳುತ ಚಲುವರಾಯನು
ಹೊರಟು ಪರಸಂಡಿಯ ನಿವಾಸವ ಬಿಡುತ ತವಕದಲಿ
ತರಳನಂದದಿ ರೂಪನಾನುತ
ಪರಿಪರಿಯ ಲೀಲೆಯನು ತೋರುತ
ಹರುಷದಿಂದಲಿ ಬಂದನಾ ಗೋವಿಂದ ನಲವಿಂದಾ ೧

ಚರಣದಲಿ ನೂಪುರವು ಗೆಜ್ಜೆಯು
ಸರಪನವು ಘಲುಘಲುರೆನುತ್ತಲಿ
ತಿರುತಿರುಗಿ ಆಡುತಲಿ ಸಭಿಕರ ನೋಡಿ ನಗಿಸುತಲಿ
ಕರದ ಕಂಕಣವಲುಗುತಿರಲಾ
ಕಿರುರವವು ಕೇಳುತಿರೆ ಒಳಿತಾ
ಶಿರದೊಳೊಲಿಯುವ ನವಿಲುಗರಿಗಳು ಒಲಿಯುತಲಿ ಒದುತಾ ೨

ಅನುಪಮದ ಕಾಂತಿಯನು ಬೀರುವ
ತನುವಿನಿಂ ರಂಜಿಸುತ ನಲಿಯುತ
ಜನಕ ಕಾಡಿರೆ ಎನ್ನನೆನ್ನು ತೊದಲುಮಾತಿನೊಳು[1]

---

1. ಎನ್ನ ಯದುಗಿರಿಗೆಂತು ವಚಿಸುತ (ಕ).

ಮನಕೆ ಹರುಷವ ನೀಡಿ ಯತಿವರ
ತನಯನಾಗಿಸಿನುಗೆನ್ನುತಲಿ ಬಹು
ಇನಿಯವಾತಿನೊಳುಸುರುತಲಿ ನಡತಂದ ಸಿರಿಚೆಲುವಾ ೩

ಚೆಡಗಿನಂದಡಿಯಿಡುತ ಎಡವುತ
ಪಿಡಿವ ಕರದಿಂ ಶಂಖ ಚಕ್ರಗ
ಳೊಡನೆ ಮಿರುಮಿರುಗುತಿಹ ದಿವ್ಯಾಭರಣ ಭೂಷಣದಿಂ
ಮುಡಿಯ ಮುಂಗುರುಳುಗಳ ಚಲುವಿನ
ನಡುವಿನೊಳು ಶಳಪಟ್ಟು ಪೊಳೆಯುವ
ಜಡಿವ ಪೀತಾಂಬರದ ಕಾಂಚಿಯ ದಾಮ ಬಳುಕುತಲೀ ೪

ದಿನಕರನ ಪೋಲುತಿಹ ಫಾಲದಿ
ಮಿನುಗುತಿಹ ಕಸ್ತೂರಿತಿಲಕವು
ವನಜದಳದಂತೆಸೆವ ಲೋಚನಯುಗಳದಂತಗಳು
ಮನದ ಸೆಳೆಯುವ ಓರೆನೋಟದಿ
ಮನುಜರನು ತಾ ಮರುಳುಮಾಡುತ
ಘನಮಹಿಮ ಶ್ರೀರಾಮಪ್ರಿಯನು ಬಂದ ಸೊಬಗಿಂದಾ ೫

ಚರಣದಂದಿಗೆ ಗೆಜ್ಜೆಯಲುಗುತ
ಮೆರೆಯುತಲಿ ಅಡಿಯಿಡುತ ನಡೆಯುತ
ಪರಿಮಳದ ಸುಮಮಾಲೆ ಕಂಠದೊಳಲುಗುತಲಿ ನಲಿದಾ
ಕಿರುನಗೆಯ ಕೋಮಲ ಕಪೋಲದ
ಮೆರೆವ ಕರ್ಣಾಭರಣವಲುಗುತ
ಮಿರುಗುತಲಿ ಒಲಿಯುತಲಿ ಚಲುವೈಯ್ಯಾರದೊಳು ಬರುತಾ ೬

ಮೂರುವರುಷದ ಬಾಲನಂದದಿ
ತೋರುತಲಿ ಲೀಲೆಗಳ ಮುದದೊಳು
ಮೀರಿದಾನಂದವನು ಬೀರುತ ಭಾಷ್ಯಕಾರರಿಗೇ

ಓರ್ನೋಟದಿ ಮನವ ಸೆಳೆದ ಉ
ದಾರಚಲುವನು ಜಗಕೆ ಬೀರುತ
ಸುಂದರಲಾವಣ್ಯಸಿಧಿ ಘನಮಾನ ಸಿರಿಚಲುವಾ ೭

ತಳಿರನಣಕಿಸ ಕರಚರಣಗಳು
ಬಳುಕುತಿಹ ಒಡಲ್ಪಡುವಿನಂದವು
ಸುಳಿಗುರುಳು ಸಂಪಿಗೆಯ ಪೋಲುವ ನಾಸಿಕದ ಚಲುವು
ಎಳನಗೆಯು ಮಂದಂತಪಙ್ಕ್ತಿಯು
ಪೊಳೆಯುತಿರುವ ವಿಶಾಲವಕ್ಷ
ಸ್ಥಳದಿ ತಳೆದಿಹ ಲಕ್ಷ್ಮಿ ಯಜ್ಞದ ಸೂತ್ರ ರಾಜಿಸುತಾ ೮

ಬಂದ ಚಲುವನು ತಂದೆಯೆನ್ನುತ
ಮಂವಗಸುನದಿ ಒಲಿಯುತಲಿ ಆ
ನಂದನನು ಏರುತಲಿ ಜಿಡಗನು ತೋರಿ ನಲಿಯುತಲೀ
ಮುಂದೆ ಕುಳಿತಿಹ ಭಾಷ್ಯಕಾರರ
ಮಂದಹಾಸದಿ ನೋಡಿ ನಗಿಸುತ
ಒಂದು ಕುಳಿತನು ಅಂಕದಲಿ ತಾ ಕಂದನಂದದಲೀ ೯

ಬಂದೆಯಾ ಗೋವಿಂದ ಸಿರಿವರ
ಸುಂದರನೆ ಯದುಗಿರಿಯ ನಾಯಕ
ಕಂದ ಉಭಯವಿಭೂತಿಗೈಶ್ವರ್ಯಕ್ಕೆ ನೀನಿಧಿಯ ಊ
ಎಂದು ಆಲಿಂಗಿಸುತ ಶಿರವನು
ಅಂದು ಕರದಿಂ ನೇವರಿಸುತಲಿ
ಬಂದು ಪರಿಕಿಸಿನೆನ್ನ ಸಲಹೆಂದುಯೆಂದನೆ ಯತಿರಾಜರ[1] ೧೦

ಬಂಧು ನೀನೆನಗೀಗ ಸಕಲಾ
ನಂದಕರ ಮುರಹರ ಸುರಾರ್ಚಿತ
ಇಂದೆನಗೆ ದರುಶನವನಿತ್ತೆಯು ಇಂದಿರಾಧವನೇ

1 ದ್ರಾ ಆಚಾರ್ಯರ್ (ಖ).

ಬಂದೆಯರಸುತ ನಿನ್ನಸಿಲ್ಲಿಗೆ
ನೊಂದೆ ಮನದೊಳು ಒಂದನರಿಯದೆ
ಬಂದು ಸೇರಿದೆ ಕರುಣಸಾಗರ ಎಂದು ಸ್ತುತಿಸಿದರೊ ೧೧
ಅಂದು ಗೋಕುಲದೊಳಗೆ ನಲಿದ ಮು
ಕುಂದ ನಂದಯಶೋದೆ ಕುವರನೆ
ಇಂದು ಬಂದೈ ಭಕುತರಾಶ್ರಯ ಪರಮಪದನಾಥ
ಕಂದ ಧ್ರುವಪ್ರಹ್ಲಾದವರದನೆ
ಕಂದನಾಸೆಯ ಎನಗೇಲಿದು
ಗೋವಿಂದ ಜಯಜಯ ಎಂದು ಸ್ತುತಿಸಿದ[1]ರಾಗ ಗುರುವರರು[1] ೧೨
ನೋಡಿದನು ಡಿಲ್ಲೀಶನೀ ಪರಿ
ರೂಢಿಗೊಡೆಯನ ಹರಿಯ ಮಹಿಮೆಯ
ನೋಡಿ ಸಂತಸಪಡುತಲಚ್ಚರಿಯಾಂತು ಮನಸೊಳಗೇ
ಪಾಡಿದನು ವಂದನೆಯ ಪೂಜೆಯ
ರೂಢಿಸುತ ಧನಕನಕವಸ್ತ್ರವ
ನೀಡುತಲಿ ಯತಿರಾಜರನು ಸತ್ಕರಿಸಿದನನುನಯದೀ ೧೩
ಅಂದು ಯತಿವರರೊಡನೆ ಜನಪತಿ
ಇಂದು ನುಡಿದನು ಇನಿಯಮಾತಿನೊ
ಳಿಂದು ಕಾಣದ [2]ಪರಿ[2] ತೋರಿದಿರಿಂಗೆ ಆಚಾರ್ಯ
ಎಂದು ಸ್ತುತಿಸುತ ಶಿರವ [3]ಬಾಗಿ[3]ಸಿ
ಕಂದ ಚಲುವನಾರಾಯಣಗೆ ತಾ
ವಂದಿಸುತ ಕರಮುಗಿದು ನಿಂತನು ಮನಮುದಗ ನೃಪತೀ ೧೪
ಮುಂದೆ ನಿಂತಿಹ ಡಿಲ್ಲಿನಾಥನ
ಮಂದಹಾಸದಿ ನೋಡಿ ಯತಿವರ
ರೆಂದು ನುಡಿದರು ಕಳುಹು ಎನ್ನನು ಯದುಗಿರಿಗೆ ಎನಲೂ

---

1. ಲ್ ಭಾಷ್ಯಕಾರರ್ ತಾವ್(ಖ). 2. ಮಹಿಮೆ(ಖ). 3. ಬಗ್ಗಿ(ಕ)

ಮುಂದೆ ನಿಂತಿಹ ವಂದಿಮಾಗಧ
ವೃಂದಗಳನೀಕ್ಷಿಸುತ ಭೂಪತಿ ೧೫
ಎಂದನಾಜ್ಞಾವಚನದಲಿ ಜನಪದವ ಕೊಂಡಾಡೇ

ಧರಣಿತೇಜನ ಮೆರೆಯುತಿರುವೀ
ಗುರುಗಳಿಗೆ ಉಪಚರಿಡಿ[1]
ವಸ್ತ್ರಾಭರಣಗಳ ನವಮುಕ್ತಾಳಿಯನಿತ್ತು ಸತ್ಕರಿಸಿ
ವರರತುನಗಳ ಕುಂದಣದಿ ಬಿಗಿ
ದಿರಿಸಿರುವ ಮಿರುಗುತಿಹ ಸಿಂ ೧೬
ಗರದ ಕುಂದಣವನ್ನು ತರಿಸಿದ ಚರಣಿಗೆಹುತಲೀ

ಚರಣಕಮಲವ ಪಿಡಿದು ಯತಿವರ
ಗೆರಗಿ ಕರಗಳ ಮುಗಿದು ವಚನಿಸ
ದಿರುವ ಭೂಪನ ನೋಡುತಲಿ ಮನ್ನಿಸುತ ಯತಿರಾಜರ್
ಭರದಿ ಸಿರಿವರ ಚಲುವರಾಯನ
ವೆರಸುತಲಿ ಕುಂದಣವನೇರುತ
ತೆರಳಿದರು ಯದುಗಿರಿಗೆ ಸುರನರರೆಲ್ಲ [2]ಕೊಂಡಾಡೇ ೧೭

ಸುರರು ಜಯಜಯವೆಂದು ಪೂಮಳೆ
ಕರೆಯೆ ದುಂದುಭಿನಾದ ಮೊಳಗಲು
ಉರುತರದ ಮಂಗಳದ ರವ ದೆಸಗಳಲಿ ಪಸರಿಸಲು
ಪರಮ ಮಂಗಳಮೂರ್ತಿ ಚಲುವನು
ತೆರಳುತಿಹ ವೈಭವಕೆ ಸಮನಹ
ಪರಿಯು ಧರಣಿಯೊಳಿಲ್ಲವಿದು ಭುವಿಜನಕೆ ಅಚ್ಚರಿಯೂ ೧೮

ಒಳಕೆ ಡಿಲ್ಲಿನಾಥ ನೋಡುತ
ಕಳುಹುತಿರೆ ಯತಿವರರ ಚಲುವನ
ತಿಳಿದು ಬಿನ್ನವಿಸಿದರು ಸಖಿಯರು ವರನಂದಿಗಾಕ್ಷಣದೀ

---

1. ದ (ಕ) 2. ಕೊಂಡಾಡೆ (ಖ)

ಗೆಳತಿಯರ ನುಡಿ [1]ಕೇಳುತಾಗಲೆ[1]
ಚಲುವರಾಯನ ಪೂಜಿಸುವ ವರ
ಲಲಿತಪೀಠನ ನೋಡಿ ಹಂಬಲಿಸುತ ಮರುಗಿದಳೂ ೧೯

ಎಲೆ ಚಲುವನಾರಾಯಣನೆ ನೀ
ಸಲೆ ಅಭಯವನು ಇತ್ತು ಎನ್ನನು
ಸಲಹುವೆನು ಎಂದೆನುತ ಪೇಳಿದ ಅಭಯವಚನವನೂ
ಸಲಿಸದಲೆ ನೀನೆಲ್ಲಿ ಪೋದೆಯೈ
ಬಳಲುತಿರುವೆನು ನಿನ್ನ ಕಾಣದೆ
ನಳಿನಸಂಭವಜನಕ ಮೊಗವ ತೋರೈ ಎನುತ ಹೊರಳಿದಳೂ ೨೦

ತಡೆದರಾಗಲೆ ಗೆಳತಿಯರು ಸವಿ
ನುಡಿಯ ಕೇಳುತ ಮನ್ನಿಸುತ್ತಲೆ
ಪಿಡಿದು ವರನಂದಿಯನು ಮನ್ನಿಸಿ ಉಪಚರಿಸಿದರು ನಯದೀ
ಬಿಡು ವ್ಯಸನವನು ಕುಸುಮಕೋಮಲೆ
ಪೊಡವಿಪಾಲಕನರಸನನು ನೀ
ಒಡನೆ ವರಿಸುತ ಪಡೆ ಸುಖವ ನೀನೆಂದರೊಗ್ಗಿನಲೀ ೨೧

ಹುಡುಕಿದಳು ಸಿರಿಚಲುವರಾಯನ
ಕಡುಚಲುವೆ ವರನಂದಿ ಅಳಲುತ
ಮುಡಿದ ಮಲ್ಲಿಗೆ ಉದುರುತಿರೆ ಮುಡಿ ಕೆದರಿ ಜೋಲುತಿರೇ
ದಡದಡನೆ ಹೊರಳುತಲಿ ನೆಲದಲಿ
ಬಿಡುತಲಂತ[2]ಪು[2]ರವ ಹೊರಡುತ
ಒಡನೆ ಬಹ ಗೆಳತಿಯರ ನೋಡದೆ ನಡೆದುಬರುತಿ[3]ಹಳೂ[3] ೨೨

ಈ ಪರಿಯ ಪರಿತಾಪದಲಿ ಆ
ತಾಪಸೋತ್ತಮ ಹರಿಯ ಕಾಣದೆ
ತಾ ಪೊರಟು ವರನಂದಿ ಅಂತಃಪುರದ ತೊರೆಯುತಲೀ

---

1. ಮನ್ನಿಸುತಾಗಲೆ (ಖ). 2. ಪು (ಖ) 3. ದಿಹಾ (ಕ)

ಶ್ರೀಪತಿಯನರಸುತಲಿ ದುಗುಡದಿ
ಕೋಪಿಸುತ ಪಿತನೆಡೆಗೆ ಸಾರುತ ೨೩
ಈಪರಿಯ ಪರಿತಾಪದಲಿ ಕೇಳಿದಳು ತತ್ಪಿತನಾ

ನೊಂದು ಮನನೊಳು ಗೆಳತಿಯರ ತಾ
ನಂದು ವನ್ನಿಸುತಾಗ ಇಲ್ಲಿರೆ
ನೊಂದು ಹೊರಟಳು ಜವದಿ ಲೆಕ್ಕಿಸದಾಗ ಪಿತನೆಡೆಗೇ
ಬಂದ ಮಗಳನು ನೋಡಿ ಭೂಪತಿ
ಇಂದಿದೇನೆನ್ನುತ್ತ ತವಕದ ೨೪
ಲಿಂದ ಅಚ್ಚರಿಪಡುತ ಕಂಡನು ಸುತೆಯ ಹಿತದಿಂದಾ

ಎನಲನಲಲುಕಮನದಿ ಮಿಡುಕುತ
ಮುನಿದು ನುಡಿದಳು ಮ್ಲೇಂಚಸುತೆ ಯಾ
ವನವಿಲಾಸದ ಸಖಿಯರೊಲವಿನ ಪರಿಯ ವಚನಕೇ ತಾ
ಮನದಿ ವರಿಸಿದೆ ಚಲುವರಾಯನ
ಮನುಜರನು ನಾ ವರಿಸಲಾರೆನು
ಎನುತಲರಚಿದಳಾಗ ವನಜದಳಾಕ್ಷಿ ದುಗುಡದಲೀ ೨೫

ಮಗಳೆ ಏಕಿಂತಳಲುತಿಹೆ ನೀ
ಮಿಗೆ ದುಗುಡವಿಂದೇಕೆ ಪಡುತಿಹೆ
ಬಗೆಯುವೇನಾ ಉಸುರೆನುತ ಕೇಳುತಿಹ ತತ್ಪಿತಗೇ
ಉಗುವ ನಯನಾಶ್ರುಗಳ ಒಳಲಿದ
ಮಿಗೆ ಬೆಮರುತಿಹ ತನುವ ಕಂಪವ
ಜೊಗಸೆಗಣ್ಣಿನ ಚೆಲುವೆ ನುಡಿದಳು ವಿನಯವಚನದಲೀ ೨೬

ಎಲ್ಲಿಕಳುಹಿದೆ ಎನ್ನದೇವರ
ಸೊಲ್ಲಿ ಲಾಲಿಸು ಜನಕನಾನವ
ನಿಲ್ಲಿಪಿಹ ಸ್ಥಳದಲ್ಲಿ ನಿಲ್ಲುಸು ಒಲ್ಲೆನೀ ಸ್ಥಳವಾ

Funding: Tattva Heritage Foundation,Kolkata. Digitization: eGangotri.

ನಲ್ಲಸೆನ್ನುತ ಬಗೆದೆ ಮನದಿ ಶ್ರೀ
ನಲ್ಲ ಯದುಗಿರಿನಾಥನನು ನಾ
ಇಲ್ಲಿರೆನು ಹುಯಿಲೊತ್ತನೆ ಪೋಪೆನು ಕಳುಹು ನೀನೆನ್ನಾ ೨೭

ಎನುತಲಾ ವರನಂದಿಯರುಹುತ
ಮನದಿ ಹರಿಯನು ಧ್ಯಾನಿಸುತ ತಾ
ತನುವನಿಳೆಯೊಳು ಚಾಚುತಲಿ ಹಂಬಲಿಸಿ ಬಳಲುತಿರೇ
ಮನದಿ ದುಗುಡವನಾಂತು ಪಿತನಾ
ತನಯಳನು ಸಂತೈಸುತಲಿ ಬಹು
ಇನಿಯವಾತಿನೊಳರುಹಿದನು ಹಿತದಿಂದ ಸುತೆಯೊಡನೇ ೨೮

ಏಕೆ ಬಳಲುವೆ ಮಗಳೆ ನಿನಗೀ
ವ್ಯಾಕುಲವು ತಾನೇಕೆ ಕೇಳೆ
ನಾ ಕರುಹುವೆನು ನೃಪಕುಮಾರರ ವರಿಸು ಹಿತದಿಂದಾ
ಸಾಕು ಬಿಡು ಸಂತಾಪವೇತಕೆ
ಲೋಕ ನಿನ್ನನು ಹಳಿಯದೆ ಬರಿ
ದೇಕೆ ಅಳಲುವೆ ಮರುಳೆ ಮಹುನಾತಾಡದಿಹೆ ಏಕೆ ೨೯

ಜನಕನಾಡಿದ ನುಡಿಯ ಕೇಳುತ
ಮನದಿ ಮಿಡುಕುತಲರುಹಿದಳು ಪಿತ
ಗನುನಯದಿ ವರನಂದಿ ಚಲುವನ ನೆನೆದು ಬಳಲುತಲಿ
ಮನುಜರನು ನಾ ವರಿಸಲಾರೆನು
ಮನದಿ ವರಿಸಿದೆ ಚಲುವರಾಯನ
ಜನಕ ಎನ್ನನು ಕಳುಹು ಪೋಗುವೆ ಹರಿಯ ಸೇರುವೆನೂ ೩೦

ನೋಡಿದನು ಡಿಲ್ಲೀಶನಚ್ಚರಿ
ಪಡುತ ವಿನಯದಿ ಸುತೆಯ ಕರೆಯುತ
ಲಾಡಿದನು ಮೃದುಮಧುರವಚನದಿ ಮಗಳ ಸಂತೈಸಿ

ಮಾಡುವೆನು ಸ್ವಯಂವರವನೀಗಲೆ
ನೋಡಿ ವರಿಸೌ ಸರಿಯು ದೊರೆಗಳ
ಮಾಡಿಕೊ ಮನದಳಲ ತೊರೆಯೆಂದೆನುತ ಪೇಳುತಿರೇ ೩೧

ಕೇಳಿದಳು ವರನಾದಿ ಜನಕನು
ಪೇಳುತಿಹ ಲೋಕೋಕ್ತಿಯುಲ್ಲವ
ನಾಲಿಸುತ ಚಿನ್ತಿಸಿದಳು ಶಶಿವದನೆ ವಿನಯದಲೀ
ನೀಲನೀರದಶಾಮಸುಮ ಕೋ
ಮಲನ ಯದುಗಿರಿನಾಥಚಲುವನ
ಲೀಲೆಯಿಂದಲಿ ಒಲಿದು ವರಿಸಿದೆ ವರಿಸೆನಿತರರನೂ ೩೨

ಎನ್ನ ಮನದೊಳು ನೆಲಸಿರುವ ಸಂ
ಪನ್ನ ಮಹಿಮನ ಯದುಕುಲೇಶನ
ಮುನ್ನ ಪತಿಯೆಂದೆನುತ ವರಿಸಿದೆ ಒಲ್ಲೆನೈ ನೃಪರಾ
ಎನ್ನ ಕಳುಹೈ ತಡವುಮಾಡದೆ
ನಿನ್ನ ಬೇಡುವೆನಿದನು ತಾತನೆ
ಎನ್ನ ತಡೆಯಲಿಬೇಡ ಪೋಗುವೆ ನಿಲ್ಲಲಾರೆನೂ ೩೩

ಎಂದುನುಡಿಯುತ ಶಿರವ ಬಾಗಿಸಿ
ನಿಂದಿರುವ ತನುಜೆಯನು ನೋಡುತ
ಮಂದಭಾಗ್ಯನು ನಿನ್ನ ತೊರೆದೆಂತಿರಲಿ ಎಂದೆನುತಾ
ಮುಂದೆ ನಿಂ[1]ದಿ[1]ಹ ವಂದಿಮಾಗಧ
ವೃಂದವನು ಪುರಜನರಮಾತ್ಯರ
ನಿಂದು ನೋಡುತ ಪೇಳಿದನು ನೃಪ ನೊಂದು ಮನದೊಳಗೇ ೩೪

ಬಳಿಕ ಕರೆಯುತ ಮಂತ್ರಿವರ್ಗವ
ಬಳುವಳಿಯ ವಸ್ತ್ರಾಭರಣಗಳ
ನಳವಡಿಸಿ ಆಂದಣದಲ್ಲಿ ಕುಳ್ಳಿರಿಸುತ್ತ ತನುಜೆಯನೂ

---

1. ಾ (ಖ).

ಫಲಿತಾ ನಿನ್ನೀ ಮನೋರಥ
ಗಳನು ಅರಿತೆನು ನಿನ್ನ ಕಳುಹುವೆ
ಚಲುವೆ ನಿನ್ನನ್ನು ಎಂದು ನೋಡುವೆನೆನುತಲೊರಲಿದನೂ ೩೫

ಧಾರಿಣೀಪತಿ ಡಿಲ್ಲಿನಾಥನು
ಮಿಂದತಿದುಗುಡದಲಿ ತನುಜೆಗೆ
ಚಾರುತರವಸ್ತ್ರಾಭರಣಗಳ ಕೊಡುತ ಬಳುವಳಿಯಾ
ನಾರಿಜನರನು ಕೊಟ್ಟು ಮನ್ನಿಸಿ
ಧೀರಮತಿ ವರನಂದಿಯನು ತಾ
ಭೂರಿವಿಭವದಿ ಬೀಳುಕೊಟ್ಟನು ಜಗವು ಬೆರಗಾಗೇ ೩೬

ಹರುಷದಿಂ ವರನಂದಿ ಪಿತನಡಿ
ಗೆರಗಿ ಭರದಿಂ ಹೊರಟು ಬಂದಳು
ಕರುಣನಿಧಿ ಶ್ರೀರಾಮಪ್ರಿಯನ ಅನವ್ರತ್ತಿ ಸುತಲಾಗಾ
ಬರುವ ಜನನಿಕರವನು ನೋಡುತ
ಬೆರಗುವಡೆದಾ ಭಾಷ್ಯಕಾರರು
ಹರುಷದಿಂ ವರನಂದಿಯನು ಮನ್ನಿಸುತ ಕರೆಕಿದರೂ ೩೭

ವನಜಲೋಚನ ಚಲುವರಾಯನ
ವನಿತೆ ವರನಂದಿಯರನೀಕ್ಷಿಸಿ
ಮನದಿ ಹರುಷವನಾಂತು ಭರದೊಳು ಲಕ್ಷ್ಮಣಾರ್ಯರು ತಾ
ವಿನಯದಿಂ ತಲೆವಾಗಿ ನಮಿಸುತ
ಇನಿಸು ಬೇಸರಪಡದೆ ನಡೆಯುತ
ಘನಮಹಿಮ ಯದುಶೈಲನಾಥನ ಸನಿಹಕೈತರಲೂ ೩೮

ಬರುತಿರಲು ಉರುತರದ ಸೈನ್ಯವು
ಭರದಿ ಹಿಂಬೈತರುತ ರಭಸದಿ
ಕರೆದು ಕದನಕೆ ನಿಲ್ಲೆನುತಲಾರ್ಭಟಿಸಿ ಕೂಗುತಿರೆ

ಪರಿಯ ನೋಡು! ಲಕ್ಷ್ಮಣಾರ್ಯರು
ತಿರುಕುಲದವರಬೀದಿಗೈದುತಲ
ವರ ಬಲದ ಸಹಾಯದಿಂ ಮ್ಲೇಂಛರನು ಗೆಲ್ಲುತಲೀ ೩೯

ವರವನೀಯುತ ತಿರುಕುಲದ ವರ
ಪರಿಜನರ ಹರಿಯಾಲಯಕೆ ನೀನ್
ಮೆರೆವ ಬ್ರಹ್ಮೋತ್ಸವದಿ ಮೂರುದಿನಂಗಳೊಳು ಹುಯೂ
ಹರುಷದಿಂ ಸೇವೆಗಳ ಮಾಡುತ
ಮರಳಿ ಪ್ರತಿಸಂವತ್ಸರದೊಳುಂ
ಹರಿಯ ಸೇವೆಯ ಮಾಳ್ಪುದೆಂದಭಯವನೀಯುತಲೀ ೪೦

ಕರುಣನಿಧಿ ಶ್ರೀಚಲುವರಾಯನ
ಕರೆದುತಂದರು ಯದುಗಿರಿಗೆ
ವರನಂದಿಸಹಿತದಲಿ ವರವ ತಿರುನಾರಣನ ಸನ್ನಿಧಿಗೇ
ಕರವ ಮುಗಿಯುತ ಭಾಷ್ಯಕಾರರು
ಶಿರವ ಹರಿಚರಣದಲಿ ಇರಿಸುತ
ಸಿರಿಯರಸ ಶ್ರೀರಾಮಪ್ರಿಯನ ಸ್ತುತಿಸಿ ನರ್ತಿಸುತಾ ೪೧

ಬಂದ ಯತಿರಾಜರನು ನೋಡುತ
ಅಂದು ತಿರುನಾರಾಯಣನು ತಾ
ಮಂದಹಾಸದಿ ನಗುತ ಮನ್ನಿಸಿ ಮಧುರವಾಣಿಯೊಳೂ
ತಂದೆ ತಂದಿಂ ಎನ್ನಪೋಲುವ
ಸುಂದರನ ಯದುಕುಲಲಲಾಮನ
ಎಂದು ಕೊಂಡಾಡಿದನು ಭುವಿಜನರೆಲ್ಲ ಬೆರಗಾಗೇ ೪೨

ಒಳ್ಳೆ ಕುಶಲವ ಕೇಳುತಲೆ ಯದು
ಶೈಲನಾಥನು ಯತಿವರರ ಕರಕ
ಮಲವನು ಪಿಡಿದಪ್ಪಿದನು ಸಂತಸದಿ ಕರುಣಾಳೂ

ಹೋಲಿಸಲು ಸಮನಿಲ್ಲವಿಳೆಯೊಳು
ಪೇಳಲಸದಳ ನಿಮಗೆ ಯಾರೆದು
ರಿಲ್ಲ ಜಗದಾಚಾರ್ಯ ನೀವೆಂದೆನುತ ಪೊಗಳಿದನೊ ೪೩

ಅಂದು ಚಲುವನಾರಾಯಣನ ಶಠ
ದಿಂದುವದನನ ರಾಮಪ್ರಿಯನ
ಒಂದುಗೂಡಿಸುತಾಗ ಸಮ್ಮೇಳನ ದರ್ಶನದಾ
ನಂದಕಡಲೊಳೋಲಾಡುತ್ತಲಿ
ನಂದಿಸುತ ಕಲ್ಪೋಕ್ತದಿಂದಲಿ
ಅಂದು ಪೂಜೆಯಗೈದರಾ ಯತಿರಾಜರೊಲವಿಂದಾ ೪೪

ಕರೆದು ವರನಂದಿಯನು ಚಲುವನು
ಇರಿಸಿದನು ತನ್ನಯ ಚರಣದೊಳು
ಧರಿಸಿದನು ವರಸಿರಿಯ ನುರದೊಳು ಪರಮಹರುಷದಲೀ
ಸುರರು ಜಯಜಯವೆಂದು ಪೂಮಳೆ
ಕರೆಯೆ ದುಂದುಭಿವಾದ್ಯ ಮೊಳಗಲು
ಉರುತರದ ಉಲ್ಲಾಸ ಪಡೆದರು ಸಕಲಭಕುತಜನಾ ೪೫

ಮಾಡಿದರು ನಿತ್ಯೋತ್ಸವಂಗಳ
ಮಾಡಿದರು ಪಕ್ಷೋತ್ಸವಂಗಳ
ಮಾಡಿದರು ಮಾಸೋತ್ಸವವ ಸಂವತ್ಸರದ ಉತ್ಸವವಾ
ಕೂಡಿಸುತ ಧನಕನಕ ವಸ್ತುವ
ರೂಢಿಗೊಡೆಯನ ಯದುಗಿರೀಶನ
ಪಾಡಿಪೊಗಳಿದರಿದುವೆ ಭೂವೈಕುಂಠವೆಂದೆನುತಾ ೪೬

ಮಂಗಳಂ ಯದುಶೈಲನಾಥಗೆ
ಮಂಗಳಂ ಯತಿರಾಜತನಯಗೆ
ಮಂಗಳಂ ಶ್ರೀರಾಮಪ್ರಿಯವರನಂದಿಯರಸನಿಗೆ

ಮಂಗಳಂ ಸ್ವರೂಪಚಲುವಗೆ
ಮಂಗಳಂ ಯದುವಂಶತಿಲಕಗೆ
ಮಂಗಳಂ ಶ್ರೀಕರಪಾಲಿನಿಪೂಜಿತಗೆ ಹರಿಗೇ

ಇಂತು ಸಕಲ-ದ್ರಾವಿಡ-ಸಂಸ್ಕೃತವೇದಪಾರಾವಾರಪಾರೀಣ-ಸ್ಮೃತೀತಿಹಾಸಾ
ಗಮಾದಿಸಕಲಶಾಸ್ತ್ರಸಂಪತ್ಸಂಯುಕ್ತ-ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾ
ಚಾರ್ಯೋಭಯವೇದಾಂತಪ್ರವರ್ತನಾಚಾರ್ಯೇತ್ಯಾದಿ-ಸಾರ್ಥಕ
ವಿಶೇಷಣ ವಿಶಿಷ್ಟ-ಶ್ರೀಶೇಷಾಂಶಭೂತಾಖಿಲಜಗದೇಕಾಚಾರ್ಯ
ಶ್ರೀರಾಮಾನುಜಾರ್ಯಾವತಾರಭೂತ-ಶ್ರೀಗೋಮಠಂ
ಶ್ರೀಯತೀಂದ್ರಪ್ರವಣವಂಶೋದ್ಭವ-ಶ್ರೀಮನ್ನೃಸಿಂಹಾರ್ಯ
ಪಾದಾಶ್ರಿತ-ಶ್ರೀರಾಘವಾರ್ಯ-ಚರಣಕಮಲಚಂಚರೀಕೆಯುಂ,
ಕವಿಕುಲಮನಸ್ಸರೋಜಿನೀರಾಜಹಂಸೆಯುಂ,
ಆದ,- ಶ್ರೀ: ಶ್ರೀರಂಗನಾಯಕೀ
ವಿರಚಿತಮಪ್ಪ,-

ಶ್ರೀ ಯದ್ವದ್ರೀಶಚರಿತಮಹಾಕಾವ್ಯದೊಳ್

ಶ್ರೀ ಭಾಷ್ಯಕಾರಕೃತಶ್ರೀರಾಮಪ್ರಿಯಾನಯನ ತದ್ವಿರಹಾಸಹಿಷ್ಣು-ತಾಲ್ಲೀಶ
ಸುತಾಕೃತ-ತದನುಸರಣ-ಶ್ರೀರಾಮಪ್ರಿಯೋತ್ಸವಮೂರ್ತಿ- ಪ್ರತಿ
ಷ್ಠಾಪನಪೂರ್ವಕ-ಶ್ರೀನಾರಾಯಣ ನಿತ್ಯೋತ್ಸವಾದಿನಿಯಮನ-
ತನ್ಮಂಗಳಾಶಾಸನಾದಿ ವಿವೇಚನಸಂಧಿಯುಂ ಸಮಾಪ್ತಂ

ಶ್ರೀ ಯದ್ವದ್ರೀಶಚರಿತಮಹಾಕಾವ್ಯ
ಸಮಾಪ್ತಂ.